ಸಂಪುಟ/Volume : 45
ಸಂಚಿಕೆ/Issue : 12
ಪುಟ/Pages : 12
ಬೆಲೆ/Price : ₹ 15/–

# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಸೆಪ್ಟೆಂಬರ್ 2023 ಮಾಸ ಪತ್ರಿಕೆ

**Akhila Karnataka Shikshaka Samachar | September 2023 | Monthly**




## 36 ನೇ ಪ್ರತಿಭಾ ಪುರಸ್ಕಾರ, ಬೆಂಗಳೂರು ದಕ್ಷಿಣ ಜಿಲ್ಲೆ




A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ಪ್ರಪಂಚಕ್ಕೆ ಗುರುವಾಗುವ ಯೋಗ್ಯತೆ ಇರುವ ಒಂದೇ ಒಂದು ದೇಶ "ಭಾರತ" ಮಾತ್ರ. ಇದನ್ನು ವಿಶ್ವದ ಅನೇಕ ನಾಯಕರು ವಿಶ್ವಸಂಸ್ಥೆಯಲ್ಲಿಯೇ ಒಪ್ಪಿಕೊಂಡು ಹೇಳಿರುವುದು, ಭಾರತದ ಶೈಕ್ಷಣಿಕ ಕ್ಷೇತ್ರದ ಸಾಧನೆಗೆ ಹಿಡಿದ ಕೈಗನ್ನಡಿ. ಸೆಪ್ಟಂಬರ್ ತಿಂಗಳು ಭಾರತದ ಉದ್ದಗಲಕ್ಕೂ ಶಿಕ್ಷಕರ ದಿನಾಚರಣೆಯನ್ನು ಆಚರಿಸುತ್ತಿರುವ ಈ ದಿನಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯಮಾಡುವ ಶಿಕ್ಷಕರಿಗೆ ಹೆಮ್ಮೆ ಎನಿಸುತ್ತದೆ. ಭಾರತದಲ್ಲಿ ವ್ಯಾಸರಿಂದ ಪ್ರಾರಂಭವಾದ ಗುರುಪರಂಪರೆ ಆಧುನಿಕ ಶಿಕ್ಷಣದ ಹರಿಕಾರರಾದ ಲೋಕ ಮಾನ್ಯ ಬಾಲಗಂಗಾಧರ ತಿಲಕ, ಡಾ॥ ರಾಧಾಕೃಷ್ಣನ್, ಜ್ಯೋತಿಭಾ ಫುಲೆ, ಸಾವಿತ್ರಿಬಾಯಿ ಫುಲೆಯಂತಹ ಮಹನೀಯರು ಶೈಕ್ಷಣಿಕ ಕ್ಷೇತ್ರದ ಪ್ರಗತಿಯಲ್ಲಿ ಶ್ರಮಿಸಿದ್ದಾರೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರರು ಶೈಕ್ಷಣಿಕ ಸಾಧನೆಯಿಂದ ಪ್ರಪಂಚಕ್ಕೆ ಪರಿಚಯವಾದವರು. ಭಾರತದ ಸಂವಿಧಾನದಲ್ಲಿ ಶಿಕ್ಷಣಕ್ಕೆ ವಿಶೇಷ ಗಮನ ನೀಡಿ "ಶಿಕ್ಷಣ" ಮೂಲಭೂತ ಹಕ್ಕನ್ನಾಗಿ ಘೋಷಿಸಿದೆ. ಇತ್ತೀಚೆಗೆ ಬುದ್ಧಿಜೀವಿಗಳೆಂದು ಹೇಳಿಕೊಳ್ಳುವ ಕೆಲವರು ಹೇಳಿದ್ದು "ಜಪಾನಿನಲ್ಲಿ ಶಿಕ್ಷಕರ ದಿನಾಚರಣೆ ಇಲ್ಲ". ಆದರೂ ಅದು ಪ್ರಗತಿ ಹೊಂದಿಲ್ಲವೆ? ಎಂದು ಪ್ರಶ್ನೆ ಮಾಡಿದ್ದರು. ಅಲ್ಲಿ ಔಪಚಾರಿಕ ದಿನಾಚರಣೆ ಇಲ್ಲದಿರಬಹುದು, ಆದರೆ ಶಾಲೆಗಳಲ್ಲಿ ಗುರುಗಳಿಗಿರುವ ಮಹತ್ವ ಮತ್ತು ಅಲ್ಲಿಯ ಪ್ರಜೆಗಳಿಗಿರುವ ಶೈಕ್ಷಣಿಕ ಕ್ಷೇತ್ರದ ಗೌರವ ನಮ್ಮ ದೇಶವನ್ನೇ ಹೋಲುತ್ತದೆ. ಜಪಾನೀಯರು ಶಿಕ್ಷಕರಿಗೆ ಕೊಡುವ ಗೌರವದ ವಿಷಯದಲ್ಲಿ ಕಡಿಮೆಯೇನಿಲ್ಲ, ಇದನ್ನು ಯಾಕೆ ಹೇಳಬೇಕಾಯಿತು ಎಂದರೆ, ಇತ್ತೀಚಿನ ದಿನಗಳಲ್ಲಿ ಭಾರತೀಯ ಪರಂಪರೆಯನ್ನು ಅವಹೇಳನ ಮಾಡುವುದನ್ನೇ ಕೆಲವರು ವೃತ್ತಿ ಮಾಡಿಕೊಂಡಿದ್ದಾರೆ.

ಭಾರತೀಯ ಗುರುಪರಂಪರೆಯಲ್ಲಿರುವ ಶಿಸ್ತು, ವಿನಯ, ಗೌರವ ಇವುಗಳು ವಿದ್ಯಾರ್ಥಿಗಳಲ್ಲಿ ಇರಬೇಕೆನ್ನುವುದನ್ನು ಜಪಾನೀಯರು ಅಷ್ಟೇ ಅಲ್ಲ, ಪ್ರಪಂಚದ ಎಲ್ಲ ದೇಶಗಳು ಒಪ್ಪುವಂತಹವುಗಳು. ಅಮೇರಿಕಾ, ಜರ್ಮನ್‌ನಂತಹ ದೇಶಗಳು ಭಾರತೀಯ ವೇದ ಪರಂಪರೆಯಲ್ಲಿರುವುದನ್ನು ವೈಜ್ಞಾನಿಕ ಅಧ್ಯಯನ ಮಾಡಿ, ಅದನ್ನು ತಮ್ಮ ದೇಶಗಳಲ್ಲಿ ಅಳವಡಿಸಿಕೊಳ್ಳುತ್ತಿರುವುದೇ ಭಾರತೀಯ ಶೈಕ್ಷಣಿಕ ಪರಂಪರೆಯ ಮಹತ್ವ ನಮಗೆಲ್ಲಾ ಅರಿವಿಗೆ ಬಂದರೆ ಸಾಕು. ಪ್ರಪಂಚವನ್ನು ಮುನ್ನಡೆಸುವ ಹಿನ್ನಲೆಯನ್ನು ಹೊಂದಿರುವ ವಾರಸುದಾರರು ನಾವೆಲ್ಲ.

ಜಿ20 ರಾಷ್ಟ್ರಗಳ ಶೃಂಗಸಭೆಗೆ ಭಾರತ ನಾಯಕತ್ವ ವಹಿಸುವುದರ ಜೊತೆಗೆ, ಇಂದು ಭಾರತದಲ್ಲಿ ಈ ರಾಷ್ಟ್ರಗಳ ಶೃಂಗಸಭೆ ನಡೆಯುತ್ತಿರುವುದು ನಮಗೆಲ್ಲ ಹೆಮ್ಮೆ. ಜಿ20 ರಾಷ್ಟ್ರಗಳಿಗೆ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸುತ್ತಿದೆ. ಜೊತೆಯಲ್ಲಿ ಭಾರತೀಯರ ನಾಯಕತ್ವ ಪ್ರಪಂಚಕ್ಕೆ ಬೇಕು ಎನ್ನುವುದನ್ನು ಸಾರುತ್ತಿದೆ.

ಮಳೆಗಾಲದ ಮಧ್ಯದಲ್ಲಿ ಬರುವ ಹಬ್ಬಗಳು, ಶ್ರಾವಣ ಮಾಸದ ಆಧ್ಯಾತ್ಮಿಕ ಉನ್ನತಿಯ ಆಚರಣೆಗಳು, ಸಹಜವಾಗಿಯೇ ಹಬ್ಬದ ಹೆಸರಿನಲ್ಲಿ ವೈಜ್ಞಾನಿಕ ಹಿನ್ನಲೆಯನ್ನು ಇಟ್ಟುಕೊಂಡು ನಾವು ದೇಹಕ್ಕೆ, ಮನಸ್ಸಿಗೆ, ಆಧ್ಯಾತ್ಮಿಕತೆಗೆ ಬೇಕಾಗಿರುವುದನ್ನು ಪಡೆಯುತ್ತೇವೆ. ಗಣೇಶ ಚತುರ್ಥಿ ಹಬ್ಬ ಒಂದು ಧಾರ್ಮಿಕ ಹಿನ್ನಲೆ ಹೊಂದಿದ್ದರೂ, ಅದು ಭಾರತೀಯರ ಸ್ವಾತಂತ್ರ ಸಂಗ್ರಾಮದಲ್ಲಿ ತಿಲಕರು ಒಂದು ಅಸ್ತ್ರವಾಗಿ ಬ್ರಿಟಿಷರ ವಿರುದ್ಧ ಬಳಸಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಣೇಶಹಬ್ಬ ಭಾರತೀಯರಿಗೆ ಒಗ್ಗಟ್ಟಿನ ಮಂತ್ರ ಬಿತ್ತಿತ್ತು. ನಮಗೆಲ್ಲ ನಮ್ಮತನವನ್ನು ಜಾಗೃತಗೊಳಿಸಿತು. ಇಂದಿನ ದಿನಗಳಲ್ಲಿಯೂ ನಮ್ಮತನವನ್ನು ಉಳಿಸಿಕೊಳ್ಳುವ ಮತ್ತು ಬೆಳೆಸಿಕೊಳ್ಳುವ ಜವಾಬ್ದಾರಿ ನಮ್ಮದಲ್ಲವೇ?

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಜನಮನ ಶಿಲ್ಪಿ ಯಾದವರಾಯರು 3
- ಏಕರೂಪ ನಾಗರಿಕ ಸಂಹಿತೆ (UCC) 5
- ಸಮಾಜ ನಿರ್ಮಾಣದಲ್ಲಿ ಮಹಿಳೆಯ ಭೂಮಿಕೆ 6
- ಇಂಡಿಯಾನಾ? ಭಾರತನಾ? 7
- 36 ನೇ ಪ್ರತಿಭಾ ಪುರಸ್ಕಾರ– ಬೆಂಗಳೂರು ದಕ್ಷಿಣ ಜಿಲ್ಲೆ 8
- ಬಹುರತ್ನಾ ವಸುಂಧರಾ 11
- ಚಿತ್ರ ಸುದ್ದಿ 12



# ಜನಮನ ಶಿಲ್ಪಿ ಯಾದವರಾಯರು



**ಇಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರನ್ನು ಕೇಳದವರು ಅತಿ ವಿರಳ. ವಾರ್ತಾ ಪತ್ರಿಕೆಗಳಲ್ಲಿ ಪ್ರತಿನಿತ್ಯ ಅದರ ಬಗ್ಗೆ ಒಂದು ತುಣುಕು ಸುದ್ದಿಯಾದರೂ ಬಂದೇ ಇರುತ್ತದೆ. 1925ರ ವಿಜಯ ದಶಮಿಯಂದು ನಾಗಪುರದಲ್ಲಿ ಡಾ॥ ಕೇಶವರಾವ್ ಹೆಡಗೇವಾರ್‌ರವರದಿಂದ ಸ್ಥಾಪಿತವಾದ ಸಂಘಟನೆ ಆರ್.ಎಸ್.ಎಸ್. ಸಮಾಜದ ಪ್ರತಿ ವ್ಯಕ್ತಿಯನ್ನು ಸಂಸ್ಕಾರದಿಂದ ಪರಿಪೂರ್ಣಗೊಳಿಸಿ, ತನ್ಮೂಲಕ ಸಂಘಟಿತ ಹಿಂದೂ ಸಮಾಜವನ್ನು ನಿರ್ಮಿಸಿ ಭಾರತಮಾತೆಯನ್ನು ವಿಶ್ವಮಾತೆಯನ್ನಾಗಿಸುವ ವಿಚಾರದಿಂದ ಪ್ರಾರಂಭವಾದ ಸಂಘಟನೆ – ಆರ್‌ಎಸ್‌ಎಸ್.**




**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**


ಇಸವಿ 1929ರ ಜನವರಿ 20. ಅಂದು ನಾಗಪುರದ ಶ್ರೀ ವೆಂಕಟೇಶ್ವರ ಥಿಯೇಟರ್‌ನಲ್ಲಿ ಒಂದು 'ಸಂಗೀತ ಸಂಜೆ' ಕಾರ್ಯಕ್ರಮ, ಮೂರು ಸಂಗೀತ ಶಾಲೆಗಳ ಬಾಲ ಪ್ರತಿಭೆಗಳಿಂದ ಗಾಯನದ ಮೂಲಕ ಪ್ರತಿಭಾ ಪ್ರದರ್ಶನ. ಸಂಗೀತದ ಖ್ಯಾತ ಗುರುಗಳಾದ ಶ್ರೀ ಶಂಕರರಾವ್ ಪ್ರವರ್ತಕರು ತಾವು ಆಯೋಜಿಸಿದ್ದ ಈ ಕಾರ್ಯಕ್ರಮಕ್ಕೆ ತಮ್ಮ ಗೆಳೆಯರಾದ ಡಾ॥ ಹೆಡಗೇವಾರ್‌ರನ್ನೂ ಆಮಂತ್ರಿಸಿದ್ದರು. ಅಂದು ತಮ್ಮ ಸುಮಧುರ ಕಂಠದಿಂದ ಶ್ರೋತೃಗಳ ಮನಸೆಳೆದವರು ಇಬ್ಬರು. ಕಿಶೋರರು– ಯಾದವ ಜೋಶಿ ಮತ್ತು ಪ್ರಭಾಕರ ಜೋಶಿ. ಹದಿಹರೆಯದ ಯಾದವ ಜೋಶಿಯಂತೂ ಆ ವಯಸ್ಸಿನಲ್ಲೇ ತನ್ನ ಪ್ರತಿಭೆಯ ಕಾರಣ 'ಸಂಗೀತ ಬಾಲ ಭಾಸ್ಕರ' ಎಂಬ ಬಿರುದು ಗಳಿಸಿದ್ದ.

ಡಾ॥ ಹೆಡಗೇವಾರರು, ಯಾದವನ ಪ್ರತಿಭೆಯನ್ನು ಮೆಚ್ಚಿ ಪ್ರೀತಿಯಿಂದ ಅವನೊಂದಿಗೆ ನಾಲ್ಕು ಮಾತುಗಳನ್ನಾಡಿದರು. ಅವರ ಚುಂಬಕ ವ್ಯಕ್ತಿತ್ವ ಯಾದವನ ಮನಸೆಳೆಯಿತು. ಯಾದವನ ಸಂಗೀತ ಗುರುಗಳಾದ ಶಂಕರರಾವ್ ಇಂದ ಡಾ॥ ಹೆಡಗೇವಾರರು ಯಾದವನನ್ನು ತಮಗೆ ಒಪ್ಪಿಸುವಂತೆ ಬೇಡಿದರು. ಅವರ ಬೇಡಿಕೆಯುನ್ನು ತಿರಸ್ಕರಿಸಲಾಗದ ಶಂಕರರಾಯುರು ಬಾಲಯಾದವನನ್ನು ಡಾ॥ಜಿಯವರ ಮಡಲಿಗೆ ಹಾಕಿದರು. ಡಾ॥ಜಿ, ಯಾದವನನ್ನು ದೇಶಕ್ಕಾಗಿ ಸರ್ವಸಮರ್ಪಣೆ ಮಾಡುವ ವ್ಯಕ್ತಿಯನ್ನಾಗಿ ರೂಪಿಸಿದರು.

ನಾಗಪುರದ ಶ್ರೀ ಕೃಷ್ಣ ಜೋಶಿಯವರದ್ದೂ ಪೌರೋಹಿತ್ಯ ವೃತ್ತಿ. ಮಡದಿ ಸತ್ಯಭಾಮ ಅವರೊಂದಿಗೆ ಚಿಕ್ಕ ಚೊಕ್ಕ ಸಂಸಾರ ಬಡತನ ಬೆನ್ನಿಗಂಟಿತ್ತು. ಇವರ ಏಕಮಾತ್ರ ಪುತ್ರ ಯಾದವ ಹುಟ್ಟಿದ್ದು 1914ರ ಸೆಪ್ಟೆಂಬರ್ 4ರಂದು. ಅನಂತ ಚತುರ್ದಶಿಯ ದಿನ. ತಿಂಗಳ ಹಸುಳೆಗೆ ಮಾತೃ ವಿಯೋಗ. ಮೂರು ವರ್ಷ ತಂದೆಯ ಆರೈಕೆ. ವಿಧುರ ಜೋಶಿಯವರು ವೃತ್ತಿ ನಡೆಸಲು ಸಂಸಾರಿಯಾಗಬೇಕಾದದ್ದು ಅನಿವಾರ್ಯ. ಹೀಗಾಗಿ ಸೌ॥ ಯಮುನಾ ಬಾಯಿಯವರನ್ನು ಯಾದವನ ಮಲತಾಯಿಯಾಗಿ ತಂದರು.

ಬಾಲಕ ಯಾದವ ಡಾ॥ಜಿಯವರ ಸಂಪರ್ಕಕ್ಕೆ ಬಂದ ನಂತರ ಸಂಘದ ಶಾಲೆಗೆ ಬರಲಾರಂಭಿಸಿದ. ಅದೊಂದು ದಿನ ಡಾ॥ಜಿ ಶಾಲೆಗೆ ಬಂದವರೇ ತಮ್ಮ ಎರಡು ನಿಮಿಷಗಳ ಭಾಷಣದಲ್ಲಿ " ಸ್ವಾತಂತ್ರ್ಯ ವೀರ ಸಾವರ್ಕರ್‌ಗೆ ರತ್ನಾಗಿರಿಯಲ್ಲಿ ಸ್ಥಾನ ಬದ್ಧತೆಯನ್ನು ಇನ್ನೂ ಎರಡು ವರ್ಷಕ್ಕೆ ವಿಸ್ತರಿಸಿದೆ. ಇದು ಸ್ವಾತಂತ್ರ್ಯ ಯೋಧನಿಗಾದ ಅಪಮಾನವಷ್ಟೇ ಅಲ್ಲ ಇದು ಎಲ್ಲ ದೇಶಾಭಿಮಾನಿಗಳಿಗಾದ ಅಪಮಾನ" ಈಗ ನಾವೆಲ್ಲಾ ನಿಶ್ಯಬ್ದವಾಗಿ ನಮ್ಮ ಮನೆಗೆ ಹೋಗಿ ಈ ಬಗ್ಗೆ ಚಿಂತಿಸಿ " ಎಂದು ಈ ಮಾತು ಯಾದವನ ಮನಹೊಕ್ಕಿತು. ಮಾತೆಯ ಅಪಮಾನ ತೊಳೆಯಲು ನಾನು ಮುಂದಾಗಬೇಕೆಂಬ ಸಂಕಲ್ಪದ ಬೀಜ ಮನದಲ್ಲಿ ಬಿತ್ತಲ್ಪಟ್ಟಿತು. ಅವನ ಬಾಳಿಗೊಂದು ದಿಕ್ಕು ಸಿಕ್ಕಿತು.

ಯಾದವ ಶಾಲಾ ಸಮಯದಲ್ಲೇ ಓರ್ವ ಉತ್ತಮ ವಾಗ್ಮಿಯಾಗಿದ್ದ 1932ರಲ್ಲಿ ಶಾಲಾಂತ್ಯ ಪರೀಕ್ಷೆಯಲ್ಲಿ ತೇರ್ಗಡೆ

ಪುಟ 4 ಕ್ಕೆ ➢

➢ ಪುಟ 3 ರಿಂದ.....

ಹೊಂದಿದ. ತಂದೆಯವರಿಗೆ ಕಾಲೇಜು ಶಿಕ್ಷಣ ಕೊಡಿಸುವಷ್ಟು ಆರ್ಥಿಕ ಅನುಕೂಲ ಇರಲಿಲ್ಲವಾದರೂ ಮಗ ಚೆನ್ನಾಗಿ ಓದಬೇಕೆಂಬ ಹಂಬಲವಂತು ಇತ್ತು. ಹಾಗೂ ಹೀಗೂ ಯಾದವ ನಾಗಪುರದ ಸಿಟಿ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ನಂತರ ಕಾನೂನು ಅಧ್ಯಯನ ಮಾಡಿ ಎಲ್‌ಎಲ್ ಬಿ ಪದವಿ ಪಡೆದು ಯಾದವರಾವ್ ಆದರು. ಎಲ್ ಎಲ್ ಬಿ ಓದುತ್ತಿದ್ದಾಗಲೇ ಅವರು ಡಾ॥ ಹೆಗಡೆವಾರರ ನಿಕಟ ಸಾನಿಧ್ಯವನ್ನು ಪಡೆದಿದ್ದರು. 1940ರ ಮೇ ನಲ್ಲಿ ಡಾ॥ ಜಿ ಖಾಯಿಲೆ ಮಲಗಿದಾಗ ಯಾದವರಾಯರು ಅವರ ಸೇವೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡರು. ಆಗಲೇ ಅವರು ಡಾ॥ಜಿಯವರು ಪ್ರಾರಂಭಿಸಿದ್ದ ಕೆಲಸವನ್ನು ಮುಂದುವರೆಸಿಕೊಂಡು ಹೋಗುವ ಸಂಕಲ್ಪ ಮಾಡಿದರು. 1940ರ ಜೂನ್ 21ರಂದು ಡಾ॥ಜಿ ಸ್ವರ್ಗಸ್ಥರಾದರು. ಆ ನಂತರ ಆರ್‌ಎಸ್‌ಎಸ್‌ನ ಮುಖ್ಯಸ್ಥರಾದ ಗುರೂಜಿ ಗೋಲ್ವಾಲ್ಕರ್‌ರವರು ಯಾದವರಾಯರನ್ನು ಕರ್ನಾಟಕದಲ್ಲಿ ಸಂಘ ಕಾರ್ಯವನ್ನು ಕಟ್ಟಿ ಬೆಳೆಸಲು ನಿಯುಕ್ತಿಗೊಳಿಸಿದರು. ನಾಗಪುರದಲ್ಲಿ ತರುಣ ಯಾದವರಾಯರಿಗೆ ಕರ್ನಾಟಕವೇ ತಪೋಭೂಮಿ ಆಯಿತು. 1940ರ ಜೂನ್ ಇಂದ 1992ರ ಆಗಸ್ಟ್‌ರವರೆಗಿನ 52 ವರ್ಷಗಳು ಈ ಕರ್ಮಕ್ಷೇತ್ರದಲ್ಲಿ ತಮ್ಮ ಶರೀರದ ಕಣಕಣವನ್ನೂ ಸವೆಸಿದರು. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಹಿಂದೂ ಸಂಘಟನೆಯ ಕಾರ್ಯ ಬೆಳೆಯುವಂತೆ ಮಾಡಿದರು. ಇಲ್ಲಿನ ಸಹಸ್ರಾರು ತರುಣರಿಗೆ ದೇಶಸೇವೆಯ ದೀಕ್ಷೆ ನೀಡಿದರು. ಹತ್ತು ಹಲವು ಪ್ರಯೋಗಗಳಿಗೆ ಪ್ರವರ್ತಕರಾದರು. ಇಂದು ಸಾಹಿತ್ಯ ಕ್ಷೇತ್ರದಲ್ಲಿ ಮನೆಮಾತಾಗಿರುವ ರಾಷ್ಟ್ರೋತ್ಥಾನ ಪರಿಷತ್ತು, ಜನಸೇವಾ ವಿದ್ಯಾಕೇಂದ್ರ, ಸೇವಾಕ್ಷೇತ್ರದ ಹಿಂದೂ ಸೇವಾ ಪ್ರತಿಷ್ಠಾನ ಮುಂತಾದ ಸಂಸ್ಥೆಗಳೆಲ್ಲಾ ಅವರ ಕಲ್ಪನೆಯ ಕೂಸುಗಳೇ.

1957ರಲ್ಲಿ ನಂಜನಗೂಡಿನ ಬಳಿಯ ಕ್ಷೇತ್ರವೊಂದರಲ್ಲಿ ಪ್ರಾಥಮಿಕ ಶಿಕ್ಷಾವರ್ಗದ ಎಂಟು ದಿನಗಳ ಶಿಬಿರಕ್ಕೆ ನಾನು ಹೋಗಿದ್ದೆ. ಅಲ್ಲೇ ನನಗೆ ಯಾದವರಾಯರ ಭೇಟಿ. ಎರಡು ದಿನಗಳ ಅವರ ಸಹವಾಸ ಅವರ ಭಾಷಣದ ಧ್ವನಿ ಎದೆ ತಟ್ಟುತ್ತಿತ್ತು. ಹೊಳೇನರಸೀಪುರದಲ್ಲಿ ಹತ್ತನೇ ತರಗತಿಯಲ್ಲಿದ್ದಾಗ ಜಿಲ್ಲಾ ಕೇಂದ್ರ ಹಾಸನದಲ್ಲಿ ಒಂದು ಬೈಠಕ್‌ನಲ್ಲಿ ಅವರ ನಿಕಟ ಸಂಪರ್ಕ. ವ್ಯಕ್ತಿಗಳನ್ನು ಅವರು ತಿದ್ದುತ್ತಾ ಇದ್ದುದು ವಿಶೇಷ. ಮೈಸೂರಿನ ಅವರ ಪ್ರವಾಸದಲ್ಲಿ ಮಾಧವಕೃಪಾ ಕಾರ್ಯಾಲಯದಲ್ಲಿ ಅವರ ನಿವಾಸ. ಅವರ ಹೋಲ್ಡ್‌ಆವ್ ಎಂಬ ಹಾಸಿಗೆ ಸುತ್ತುತ್ತಾ ಇದ್ದೆ. ಪ್ರಾತಃ ವಿಧಿಯ ವಸ್ತುಗಳು, ಕೈದೀಪ (ಟಾರ್ಚ್), ಕನ್ನಡಕ ಇತ್ಯಾದಿ ವಸ್ತುಗಳನ್ನೂ ಅದರಲ್ಲೇ ಇಡಬೇಕು. ನಾನು ಅದನ್ನು ಇಡುತ್ತಿದ್ದುದನ್ನು ಗಮನಿಸಿದ ಅವರು ನನಗೆ ಕಲಿಸಿದ ಪಾಠ 'ಪ್ರತಿವಸ್ತುಗೂ ಒಂದು ನಿಶ್ಚಿತವಾದ ಜಾಗ ಮತ್ತು ಉಪಯೋಗಿಸಿದ ನಂತರ ಅದನ್ನು ಅದೇ ಜಾಗದಲ್ಲಿ ಇಡಬೇಕು' ಇದರಿಂದ ಸಮಯ ಮತ್ತು ಶ್ರಮ ಎರಡೂ ಉಳಿತಾಯವಾಗುತ್ತದೆ ಎಂಬುದೇ ಅವರು ಕಲಿಸಿದ ಪಾಠ.

ನಾನು ಸಂಪಾದಕನಾಗಿದ್ದ 'ಶಿಕ್ಷಕ ಸಮಾಚಾರ' ಮಾಸ ಪತ್ರಿಕೆಯ ವಿಶೇಷಾಂಕವನ್ನು ಒಮ್ಮೆ ಅವರಿಗೆ ಕೊಡಲು ಹೋದಾಗ ನಡೆದ ಪ್ರಸಂಗ, ನನ್ನ ಸಂಪಾದಕೀಯವನ್ನು ಅವರಿಗೆ ಓದಿ ಹೇಳಿದೆ. ಅದರಲ್ಲಿ ನಾನು ಬರೆದಿದ್ದ "ನಿಮಗೆ ಇಷ್ಟವಾದಲ್ಲಿ ಓದಿರಿ, ಇಲ್ಲವಾದಲ್ಲಿ ಬಿಡಿ' ಎಂಬ ವಾಕ್ಯವನ್ನು ಎರಡೆರಡು ಬಾರಿ ಓದಿ ಕೇಳಿಸಿಕೊಂಡರು. ನಂತರ ನನ್ನನ್ನು ಉದೇಶಿಸಿ ' ಈ ವಾಕ್ಯವನ್ನು ಏಕೆ ಬರೆದೆ? ನಾವು ಬರೆದುದು ಎಲ್ಲರಿಗೂ ಇಷ್ಟವಾಗಲೇಬೇಕು. ಇಷ್ಟವಾಗದುದನ್ನು ಯಾರು ತಾನೇ ಬರೆಯುತ್ತಾರೆ? ಈ ರೀತಿ ಋಣಾತ್ಮಕ ಭಾವನೆ ಎಂದಿಗೂ ನಮಗೆ ಬರಬಾರದು' ಎಂದು ತಿದ್ದಿದರು.

ಮತ್ತೊಮ್ಮೆ ಅವರೊಂದಿಗೆ ಮಾತನಾಡುತ್ತಿದ್ದಾಗ TARGET ಎಂಬ ಪದವನ್ನು 'ಟಾರ್‌ಗೆಟ್' ಎಂದು ಉಚ್ಚರಿಸಿದೆ. ಕೂಡಲೇ ಅವರು ಎದುರುಗಡೆ ಇದ್ದ ಬೀರುವನ್ನು ತೋರಿಸಿ ಅದರ ಎರಡನೇ ಹಂತದಲ್ಲಿ ಜೋಡಿಸಿರುವ ಆರನೇ ಪುಸ್ತಕವನ್ನು ತರುವಂತೆ ಹೇಳಿದರು. ಅದು ಇಂಗ್ಲೀಷ್ ನಿಘಂಟು. ಅದರಲ್ಲಿ ನಾನು ಹೇಳಿದ ಪದವನ್ನು ಹುಡುಕಲು ಹೇಳಿ ಅದರ ಉಚ್ಚಾರವನ್ನು ಓದುವಂತೆ ತಿಳಿಸಿದರು. ಅದು ಟಾರ್ಗೆಟ್ ಅಲ್ಲ, ಟಾರ್‌ಜೆಟ್ ಎಂದಾಗಿತ್ತು. ಸಣ್ಣ ಸಣ್ಣ ಸಂಗತಿಗಳೂ ಪರಿಪೂರ್ಣವಾಗಿರಬೇಕು ಎಂಬುದು ಅವರ ಆಗ್ರಹವಾಗಿತ್ತು.

●

## ಓದುಗರ ಸ್ಪಂದನೆ

**ಶಿಕ್ಷಕ ಸಮಾಚಾರದಲ್ಲಿ ಎಲ್ಲಾ ಲೇಖನಗಳು ಬಹಳ ವಿಷಯಯುಕ್ತವಾಗಿ ಬರುತ್ತಿವೆ. ಶಿಕ್ಷಕ ಸಮಾಚಾರ ಮುಂದೆ ಯಾವ ವಿಶೇಷ ಹೊತ್ತು ನಮ್ಮ ಕೈಸೇರುತ್ತದೆ ಎಂಬ ಉತ್ಸುಕತೆ ಇರುತ್ತದೆ. ಶಿಕ್ಷಕ ಸಮಾಚಾರದ ಬರಹಗಾರರಿಗೆ ನನ್ನ ಅಭಿನಂದನೆಗಳು. "ಸ್ವಾತಂತ್ರ್ಯದ ಅಮೃತಕಾಲ – ಶಿಕ್ಷಕರ ಜವಾಬ್ದಾರಿ ಈ ವಿಷಯವಾಗಿ ಬರೆದಿರುವ ಹೆಚ್. ನಾಗಭೂಷಣ್ ರಾವ್‌ರವರ ಲೇಖನ ಬಹಳ ಅದ್ಭುತವಾಗಿದೆ. ಓದುವ ಹಸಿವಿರುವ ನಮ್ಮಂತವರಿಗೆ ಇಂತಹ ಲೇಖನದಿಂದ ತೃಪ್ತರಾಗಿಸಿದಿರಿ.**

**– ಬಿ. ಆರ್. ಹರಿದಾಸ್**

# ಏಕರೂಪ ನಾಗರಿಕ ಸಂಹಿತೆ (UCC)

**ಡಾ॥ ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು 'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**



ಪ್ರಸಕ್ತ ಇಡೀ ರಾಷ್ಟ್ರದಾದ್ಯಂತ ಏಕರೂಪ ನಾಗರೀಕ ಸಂಹಿತೆಯ ಪರ ಮತ್ತು ವಿರೋಧದ ಚರ್ಚೆಗಳು ಸಾಗುತ್ತಿದೆ. ಪ್ರಜ್ಞಾವಂತ ನಾಗರೀಕರಾಗಿ, ಭಾರತ ದೇಶದ ಜವಾಬ್ದಾರಿಯುತ ಪೌರರಾಗಿ ನಾವೆಲ್ಲರು 'ಏಕರೂಪ ನಾಗರೀಕ ಸಂಹಿತೆ'ಯ ಪರ ನಿಲ್ಲುವುದು ತಕ್ಷಣದ ಅನಿವಾರ್ಯವಾಗಿದೆ.

ಏಕರೂಪ ನಾಗರೀಕ ಸಂಹಿತೆ ಅಥವಾ ಏಕರೂಪ ಸಿವಿಲ್‌ಕೋಡ್ ಎಂದರೆ ಮದುವೆ, ವಿಚ್ಛೇದನ, ಉತ್ತರಾಧಿಕಾರ, ದತ್ತು, ನಿರ್ವಹಣೆ ಇತ್ಯಾದಿ ಸಂಗತಿಗಳಿಗೆ ಸಂಬಂಧಿಸಿದಂತೆ ಧಾರ್ಮಿಕ ಸಮುದಾಯಗಳಲ್ಲಿ ವ್ಯತ್ಯಾಸವಿದೆ. ಆದ ಕಾರಣ ಇಂತಹ ವ್ಯತ್ಯಾಸಗಳನ್ನು ನಿವಾರಿಸಿ ಭಾರತದ ಎಲ್ಲಾ ನಾಗರೀಕರಿಗೆ ಅನ್ವಯವಾಗುವ ಸಮಾನ ಕಾನೂನನ್ನು ಜಾರಿಗೊಳಿಸುವುದೇ ಏಕರೂಪ ನಾಗರಿಕ ಸಂಹಿತೆಯ ಆಶಯುವಾಗಿದೆ. ಭಾರತದಲ್ಲಿರುವ ಎಲ್ಲಾ ನಾಗರೀಕರಿಗೆ ಏಕರೂಪ ಕ್ರಿಮಿನಲ್ ಕೋಡ್ ಇದೆ. ಆದರೆ ಏಕರೂಪ ನಾಗರಿಕ ಕಾನೂನನ್ನು ಹೊಂದಿಲ್ಲ. ಆದ್ದರಿಂದ ಏಕರೂಪ ನಾಗರೀಕ ಸಂಹಿತೆಯ ಪ್ರಸ್ತುತತೆ ಇದೆ.

ಭಾರತ ಸಂವಿಧಾನದ ಆಶಯದಂತೆ ಕಾನೂನುಗಳಲ್ಲಿ ಸಮಾನತೆ ಇರುವುದು ಹಾಗೂ ರಾಜ್ಯ ನೀತಿಯ ನಿರ್ದೇಶನ ತತ್ವಗಳ ಭಾಗವಾಗಿರುವ ಸಂವಿಧಾನದ 44ನೇ ವಿಧಿಯು ಸಹ ಭಾರತದ ಭೂಪ್ರದೇಶದಲ್ಲಿರುವ ಎಲ್ಲಾ ನಾಗರೀಕರಿಗೆ ಏಕರೂಪ ನಾಗರೀಕ ಸಂಹಿತೆಯನ್ನು ಭದ್ರಪಡಿಸಲು ರಾಜ್ಯವು ಪ್ರಯತ್ನಿಸುತ್ತದೆ ಎಂದು ತಿಳಿಸಿದೆ.

## ಏಕರೂಪ ನಾಗರೀಕ ಸಂಹಿತೆಯ ಅಗತ್ಯತೆ

- ಎಲ್ಲಾ ಧಾರ್ಮಿಕ ಪಂಗಡಗಳ ಜನತೆಗೆ ನ್ಯಾಯ ಮತ್ತು ಸಮಾನತೆ ಒದಗಿಸುವುದು.
- ಎಲ್ಲಾ ಧಾರ್ಮಿಕ ಸಮುದಾಯಗಳಲ್ಲಿರುವ ಬಾಲ್ಯವಿವಾಹ ನಿಷೇದಿಸುವುದು.
- ಎಲ್ಲಾ ಧಾರ್ಮಿಕ ವಿವಾಹಗಳು ಜರುಗಿದಾಗ ಕಡ್ಡಾಯ ನೊಂದಣಿ ಮಾಡಿಸುವುದು.
- 'ಒಂದು ದೇಶ, ಒಂದೇ ಕಾನೂನು' – ಇದು ಎಲ್ಲಾ ಧಾರ್ಮಿಕ ನಂಬಿಕೆಗಳಿಗೆ ಸಂಬಂಧಿಸಿದ ಸರ್ವರಿಗೂ ಅನ್ವಯವಾಗುವಂತದ್ದು.

## ಏಕರೂಪ ನಾಗರೀಕ ಸಂಹಿತೆಯ ಪರ ಇರುವ ವಾದಗಳು

- **ಜಾತ್ಯಾತೀತ ಸಮಾಜದ ನಿರ್ಮಾಣ:–** ಧರ್ಮದಿಂದ ಕಾನೂನನ್ನು ಬೇರ್ಪಡಿಸುವುದು. ಎಲ್ಲರಿಗೂ ಸಮಾನ ಕಾನೂನು ಅನ್ವಯಿಸುವಂತೆ ಮಾಡುವುದು. ಉದಾ: ಹಿಂದೂ ಮಹಿಳೆಗೆ ಇರುವ ವೈಯಕ್ತಿಕ ಕಾನೂನುಗಳು, ಮುಸ್ಲಿಂ ಸಮುದಾಯದ ಮಹಿಳೆಗೆ ಭಿನ್ನವಾಗಿರುವುದು.
- **ಸಮಾನತೆ:–** ಧಾರ್ಮಿಕ ಅಂಶದ ಮೇಲೆ ಕಾನೂನುಗಳಲ್ಲಿ ಅಸಮಾನತೆ, ಶಾಸನ ಮತ್ತು ಕಾನೂನುಗಳಲ್ಲಿ ಸಮಾನತೆ ಸಾಧಿಸುವುದು. ಉದಾ: ಮುಸ್ಲಿಂ ಸಮುದಾಯದಲ್ಲಿ ಎಷ್ಟು ಬಾರಿ ಆದರೂ ವಿವಾಹಕ್ಕೆ ಅವಕಾಶ ಆದರೆ ಹಿಂದೂ ಮತ್ತು ಕ್ರಿಶ್ಚಿಯನ್ ಸಮುದಾಯದಲ್ಲಿ ಅವಕಾಶ ಇಲ್ಲದೆ ಇರುವುದು.
- **ಭಾರತೀಯ ಸಮಾಜದ ಸ್ವರೂಪ:** ಜಾತ್ಯತೀತ ಗಣತಂತ್ರ ರಾಷ್ಟ್ರವಾಗಿರುವ ಭಾರತಕ್ಕೆ ಬೇಕಾಗಿರುವುದು ಏಕರೂಪ ಕಾನೂನು. ಇದು ಎಲ್ಲಾ ಭಾರತೀಯ ಪೌರರಿಗೆ ಸಮಾನವಾಗಿರಬೇಕು.
- **ಲಿಂಗ ಅಸಮಾನತೆ:–** ಧಾರ್ಮಿಕ ಕಾನೂನುಗಳನ್ವಯ ಮಹಿಳೆಯ ಸ್ವಾತಂತ್ರ್ಯವನ್ನು ಗೌಣವಾಗಿಸುವುದು. ಉದಾ: ತ್ರಿವಳಿ ತಲಾಕ್.
- **ಯುವ ಜನತೆಯ ಆಶಯ:** ಭಾರತದ ಶೇಕಡಾ 55ರಷ್ಟು ಒಟ್ಟು ಜನಸಂಖ್ಯೆ ಶೇಕಡಾ ಅರ್ಧದಷ್ಟು 25 ವರ್ಷ ಒಳಗಿನ ಯುವ ಜನತೆಯನ್ನು ಹೊಂದಿದೆ. ಇಂತಹ ಯುವ ಜನತೆಯು ಸಾಮಾಜಿಕ ಮನೋಭಾವ, ಆಶಯ, ಆಕಾಂಕ್ಷೆಗಳು ಸಾರ್ವತ್ರಿಕ ತತ್ವಗಳಾದ ಮಾನವೀಯತೆ, ಸಮಾನತೆ ಮತ್ತು ಆಧುನಿಕತೆಯನ್ನು ಒಳಗೊಂಡಿದೆ.
- ಮತಾಂಧತೆಯನ್ನು ನಿವಾರಿಸುವುದು.
- ಪ್ರತಿಯೊಬ್ಬ ನಾಗರೀಕನ ಮೂಲಭೂತ ಹಕ್ಕುಗಳನ್ನು ಗೌರವಿಸುವುದು.
- ರಾಷ್ಟ್ರೀಯ ಸಮಗ್ರತೆಯನ್ನು ಕಾಪಾಡುವುದು– 'ಒಂದು ರಾಷ್ಟ್ರ, ಒಂದು ಕಾನೂನು' ಎಂಬುದನ್ನು ಸಾಕ್ಷಾತ್ಕರಿಸುವುದು.
- ಮತ ಬ್ಯಾಂಕ್ ರಾಜಕೀಯವನ್ನು ಕಡಿಮೆ ಮಾಡುವುದು.
- ಕಾನೂನುಗಳನ್ನು ಸರಳಗೊಳಿಸುವುದು.
- ಸಮಾನ ಅವಕಾಶ ಕಲ್ಪಿಸುವುದು.

ಪುಟ 9 ಕ್ಕೆ ➢

# ಸಮಾಜ ನಿರ್ಮಾಣದಲ್ಲಿ ಮಹಿಳೆಯ ಭೂಮಿಕೆ

ಆರ್. ಸೀತಾಲಕ್ಷ್ಮಿ
ಮಾರ್ಗದರ್ಶಕರು,
ಕರ್ನಾಟಕ ರಾಜ್ಯ ಮಾಧ್ಯಮಿಕ
ಶಿಕ್ಷಕ ಸಂಘ



**'ಮರವಿಲ್ಲದೆ ಪರಿಸರವಿಲ್ಲ
ತಾಯಿಯಿಲ್ಲದೆ ಸಂತಾನವಿಲ್ಲ,
ಮಹಿಳೆಯಿಲ್ಲದೆ ದೇಶದ ಪ್ರಗತಿ ಇಲ್ಲ."**

ನಾರಿಯಿಲ್ಲದೆ ಸಮಾಜದ ಕಲ್ಪನೆಯೇ ಇಲ್ಲ. ಸಮಾಜದಲ್ಲಿನ ವಿಡಂಬನೆ, ಅಪಹಾಸ್ಯ, ನಿರ್ಲಕ್ಷ್ಯ, ಅನಾದರಣೆ ಇವುಗಳ ನಡುವೆಯೂ ಸ್ತ್ರೀ, ಮಹಿಳೆ ಪುರುಷನ ಜೊತೆ ಸರಿಸಮಾನಳಾಗಿ ಭುಜಕ್ಕೆ ಭುಜ ನೀಡುವ ಮೂಲಕ ಸಮಾಜದ ಪ್ರಗತಿಯಲ್ಲಿ ಹೆಚ್ಚು ಪಾಲುದಾರಳಾಗಿದ್ದಾಳೆ. ಮನೆ ಮತ್ತು ಹೊರಗಡೆ ಎರಡೂ ಕರ್ತವ್ಯಗಳನ್ನು ನಿಭಾಯಿಸಿ ತನ್ನ ಕಾರ್ಯಕ್ಷಮತೆಯನ್ನು ತೋರಿಸಿದ್ದಾಳೆ.

ಯಾವುದೇ ಸಮಾಜದ ಸ್ವರೂಪವು ನಾರೀಶಕ್ತಿಯಿಂದಲೇ ಗುರುತಿಸಲ್ಪಡುತ್ತದೆ ಹಾಗೂ ನಿಯಂತ್ರಿಸಲ್ಪಡುತ್ತದೆ.

ಇತಿಹಾಸ ಕಾಲದಿಂದಲೂ ಸ್ತ್ರೀಯರ ಸ್ಥಿತಿಗತಿ ಉತ್ತುಂಗ ಸ್ಥಾನದಲ್ಲಿತ್ತು. ಯಜ್ಞ ಮಾಡುವ ಹಾಗೂ ಯಜ್ಞೋಪವೀತಧಾರಣೆಯ ಅವಕಾಶವೂ ಇತ್ತು. ಅಭಿವ್ಯಕ್ತ ಸ್ವಾತಂತ್ರ್ಯವಿತ್ತು.

ಅನೇಕ ಸಂದರ್ಭಗಳಲ್ಲಿ ತನ್ನ ಕ್ಷಮತೆಯಿಂದ ರಾಷ್ಟ್ರವೊಂದೇ ಅಲ್ಲ ವಿಶ್ವಕ್ಕೆ ತನ್ನ ಪ್ರತಿಭೆಯನ್ನು ಹಾಗೂ ಸ್ವಶಕ್ತಿಯನ್ನು ಪ್ರದರ್ಶಿಸುತ್ತಿದ್ದಳು.

ಸ್ತ್ರೀಯರ ಭೂಮಿಕೆ ಬಗ್ಗೆ ಅನೇಕರು ತಮ್ಮ ಅಭಿಪ್ರಾಯವನ್ನು ವಿವಿಧ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ವಿದೇಶಿಯನಾದ ನೆಪೋಲಿಯನ್ "ನನಗೆ ನೂರು ಮಾತೆಯರನ್ನು ಕೊಡಿ ನಾನು ಒಂದು ರಾಷ್ಟ್ರವನ್ನು ನಿರ್ಮಿಸಿಕೊಡುತ್ತೇನೆ" ಎಂದಿದ್ದಾರೆ. ಪರಮ ಪೂಜ್ಯ ಗುರೂಜಿಯವರು– ಮಮತೆ ಹಾಗೂ ಮಾಧುರ್ಯವನ್ನು ಸಂವಹಿಸುವ ಮಾತೆಯರೇ ರಾಷ್ಟ್ರದ ತೇಜಸ್ವೀ ಜನಾಂಗವನ್ನು ನಿರ್ಮಿಸುವಲ್ಲಿ ಸಮರ್ಥರೆಂದಿದ್ದಾರೆ.

ಇತಿಹಾಸದಲ್ಲಿ ಸ್ತ್ರೀಯರ ಭೂಮಿಕೆ ಮಧ್ಯಕಾಲೀನ ಯುಗದಲ್ಲಿ ಗಮನಿಸಿದರೆ ಕಾಲಗತಿಸಿದ ಹಾಗೆ ಮಹಿಳೆಯರ ಸ್ಥಿತಿ ಬಲಹೀನವಾಗಿ ಕುಸಿಯುತ್ತಾ ಬಂದಿದೆ. ನಾರಿಯರ ಗೌರವಾದರಗಳು ಕಡಿಮೆಯಾಯಿತು. ಸ್ತ್ರೀ ಶಿಕ್ಷಣದ ಬಗ್ಗೆ ಹೆಚ್ಚಿನ ಒತ್ತು ಕೊಡಲಿಲ್ಲ. 4 ಗೋಡೆಗಳ ನಡುವೆ ಬಂದಿಯಾದಳು. ಮಾತೆ ಶಿಕ್ಷಕಿಯಾದರೆ ತನ್ನ ಮುಂದಿನ ಜವಾಬ್ದಾರಿ ಕರ್ತವ್ಯಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಬಲ್ಲಳು. ಅಶಿಕ್ಷಿತೆಯಾದರೆ ಅವಳು ಜೀವನ ನೋಡುವ ದೃಷ್ಟಿಕೋನ ಅವಳ ಯೋಚನೆಯ ಪರಿಧಿ ಸೀಮಿತಗೊಳ್ಳುತ್ತದೆ. ಆದ ಕಾರಣ ಸ್ತ್ರೀಯರ ಸುಧಾರಣೆಯಾದರೂ ಜಗತ್ತಿನ ಸುಧಾರಣೆ ಆಗುತ್ತದೆ.

ಮೌರ್ಯನ ಕಾಲವನ್ನು ಸುವರ್ಣಯುಗವೆನ್ನುತ್ತಿದ್ದರು. ಆ ಕಾಲದಲ್ಲಿ ಶಾಸನಾಧ್ಯಕ್ಷನ ಸ್ಥಾನದಿಂದ ಅಂಗರಕ್ಷಕನ ಸ್ಥಾನದವರೆಗೂ ಮಹಿಳೆಯರಿದ್ದರು.

ಚಾಣಕ್ಯನ ಕಾಲದಲ್ಲಿ ಸೈನ್ಯದಲ್ಲಿ, ಕ್ರೀಡೆಯಲ್ಲಿ, ರಾಜಕೀಯದಲ್ಲಿಯೂ ಮಹಿಳೆಯರು ನಿಪುಣರಾಗಿದ್ದರು.

ತುಲಸೀದಾಸ ಪತ್ನಿ ರತ್ನಾವಳಿ ಆಧ್ಯಾತ್ಮಿಕ ಶಕ್ತಿಯಾಗಿ ತುಲಸೀದಾಸನಿಗೆ ಪ್ರೇರಣೆ ನೀಡುತ್ತಾಳೆ. ಶಿವಾಜಿ, ಗಾಂಧೀಜಿ ಮಹಾರಾಣ ಪ್ರತಾಪ ಮೊದಲಾದವರು ತಮ್ಮ ತಾಯಿ ಹಾಗೂ ಪತ್ನಿಯ ಸಹಕಾರದಿಂದ ಶ್ರೇಷ್ಠರಾಗಿದ್ದಾರೆ.

ಭಾರತೀಯ ನಾರಿಯ ಸಾಮರ್ಥ್ಯ ಶಕ್ತಿಯನ್ನು ಅವಳ ಭೂಮಿಕೆಯನ್ನು ಅವಲೋಕಿಸಬೇಕಾಗುತ್ತದೆ. ಅರುಂಧತಿ ಅಹಲ್ಯೆ, ಮೈತ್ರೇಯಿ, ಕಾತ್ಯಾಯಿನಿ, ಗಾರ್ಗಿಯಿಂದ ಹಿಡಿದು ಸುಪ್ರಜೆಯನ್ನು ಹೆತ್ತ ಭಾರತದ ನೆಲವನ್ನು ಪುಣ್ಯ ಭೂಮಿಯನ್ನಾಗಿ ಪರಿವರ್ತಿದವರಿದ್ದಾರೆ. ಧರ್ಮಕ್ಕಾಗಿ ಪ್ರಾಣತ್ಯಾಗ ಮಾಡಿದವರಿದ್ದಾರೆ. ಮೌಲ್ಯಗಳಿಗಾಗಿ ಬದುಕಿನ ಸಾಧ್ವಿ ಮಣಿಗಳಿದ್ದಾರೆ. ದರ್ಶನ ಶಾಸ್ತ್ರವನ್ನು ಬರೆದವರಿದ್ದಾರೆ. ನಾರೀಶಕ್ತಿಯನ್ನು ಹೊರಗಿಟ್ಟು ಭಾರತೀಯ ತತ್ವಶಾಸ್ತ್ರವನ್ನು ವಿವರಿಸುವುದು ಕಷ್ಟ.

ಭಾರತೀಯ ದರ್ಶನ ಕೇವಲ ಋಷಿ ಮುನಿಗಳ ಕಾಲದ ಗತವ್ಯಾಖ್ಯಾನವೇನಲ್ಲ. ಕಾಲಕಾಲಕ್ಕೆ ವ್ಯಾಖ್ಯಾನಕ್ಕೊಳ್ಳಪಟ್ಟು ಹೊಸ ಹೊಳಪಿನಿಂದ ಹೊಸ ಜಗತ್ತಿನೆದುರು ಬೆಳಕನ್ನು ಮೂಡಿಸುತ್ತಲೇ ಬಂದಿದೆ. ಶ್ರೀಮಾತೆ, ಶಾರದಾ ಮಾತೆ ನಿವೇದಿತಾರಂತಹ ಸಾಧ್ವಿಗಳು, ಆಧುನಿಕ ಋಷಿ ಪತ್ನಿಯರು ಗುರುಮಾತೆಯರೂ ಕೂಡ ಈ ಭಾರತೀಯ ತತ್ವಶಾಸ್ತ್ರವನ್ನು ಬೆಳಗಿಸಿದ್ದಾರೆ.

ಈ ಸಂದರ್ಭದಲ್ಲಿ ಏಳುವರೆ ದಶಕಗಳ ಹಿಂದೆ ಕೂಡ ಒಬ್ಬ ನಾರೀಶಕ್ತಿ ಭಾರತೀಯ ತತ್ವಶಾಸ್ತ್ರವನ್ನು ದೇಶ ವಿದೇಶದಲ್ಲೂ ಬೆಳಗಿದ ಘಟನೆಯನ್ನು ಸ್ಮರಿಸಬಹುದು.

ಆಂಧ್ರ ಪ್ರದೇಶದ ಕೊಲನಕೊಂಡ ಜಿಲ್ಲೆಯ ಪುಟ್ಟ ಹಳ್ಳಿಯಲ್ಲಿ ಜನಿಸಿದ ಸೂರಿನಾಗಮ್ಮ 10ನೇ ವಯಸ್ಸಿಗೆ ತಂದೆಯನ್ನು, 11ನೇ ವಯಸ್ಸಿನಲ್ಲಿ ಗಂಡನನ್ನೂ ಕಳೆದುಕೊಂಡು ಅನಾಥೆಯಾಗಿ ಅಣ್ಣಂದಿರ ಕೈ ಕೆಳಗೆ ಜೀವನ ಸಾಗಿಸಿದಳು. ಅಣ್ಣಂದಿರು ಓದಲು ಭಾಗವತ, ತೆಲಗು ಭಾರತ ಮತ್ತು ಭಗವದ್ಗೀತೆಗಳು ಓದಲು ಪ್ರೇರಣೆ ನೀಡಿದಾಗ ಅನಕ್ಷರಸ್ಥ ನಾಗಮ್ಮನಿಗೆ ಕಷ್ಟವಾಯಿತು. ಓದಲೇಬೇಕೆಂಬ ತುಡಿತದಿಂದ ತನಗೆ ತಾನೇ ಗುರುವಾಗಿ

ಪುಟ 10 ಕ್ಕೆ ➤

# ಇಂಡಿಯಾನಾ? ಭಾರತನಾ?

■ ಸಂಗ್ರಹ

ಇಂಡಿಯಾ, ದಟ್ ಈಸ್ ಭಾರತ್ – ಹೆಸರಲ್ಲೇನಿದೆ?. (ಒಂದಷ್ಟು ಮಾಹಿತಿ)

ಭಾರತವೋ ಇಂಡಿಯಾವೋ, ಹೆಸರಲ್ಲೇನಿದೆ ಎಂದು ಕೇಳಬಹುದು. ಹೆಸರಿನಲ್ಲಿ ಏನಿಲ್ಲ? ಎಲ್ಲವೂ ಇದೆ!. ನಮ್ಮ ಹಿರಿಯರು ನಮ್ಮ ರಾಷ್ಟ್ರಕ್ಕಾಗಲೀ, ವಿವಿಧ ಭೂಪ್ರದೇಶ, ನಗರಗಳಿಗಾಗಲೀ ಸುಖಾ ಸುಮ್ಮನೆ ಹೆಸರಿಟ್ಟಿಲ್ಲ. ಹೆಸರು ಇಡೋದಕ್ಕೂ ಒಂದು ಅರ್ಥವಿತ್ತು, ಪೌರಾಣಿಕ ಹಿನ್ನೆಲೆ ಇತ್ತು, ಭವ್ಯ ಇತಿಹಾಸವಿತ್ತು.

ನಮ್ಮ ದೇಶಕ್ಕೆ ಜಂಬೂದ್ವೀಪ (ಇದರ 9 ಭಾಗಗಳಲ್ಲಿ ಅವಿಭಜಿತ ಭಾರತವು ಒಂದು ಭಾಗ!. ನಮ್ಮ ಕಾವ್ಯ ಪುರಾಣಗಳಲ್ಲಿ ಜಂಬೂದ್ವೀಪದ ಉಲ್ಲೇಖಗಳೇ ಹೆಚ್ಚು!), ಭರತವರ್ಷ, ಭರತ ಖಂಡ, ಆರ್ಯಾವರ್ತ, ಅಜನಾಭವರ್ಷ, ಹಿಂದೂಸ್ಥಾನ, ಭಾರತ ಮತ್ತು ಗ್ರೀಕ್/ಆಂಗ್ಲರು ಕೊಟ್ಟ ಹೆಸರಾದ ಇಂಡಿಯಾ ಎಂಬ ಹೆಸರುಗಳಿವೆ.

## ಭಾರತ ಎಂಬ ಹೆಸರಿನ ಅರ್ಥ ನೋಡೋಣ

1. ಈ ಭಾರತ ಎನ್ನುವ ಪದವೇ ಅದ್ಭುತ!. ಮಹಾಭಾರತಕ್ಕಿಂತ ಮೊದಲೇ ಇತ್ತು ಭಾರತ. ಭಗವದ್ಗೀತೆಯಲ್ಲಿ ಕೃಷ್ಣ, ಅರ್ಜುನನ್ನು ಕುರಿತು ಹೇಳುತ್ತಾನೆ – ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ... ಇಲ್ಲಿ ಭಾರತ ಎಂದರೆ ಭರತವಂಶದ ಕುಡಿ ಎಂಬ ಅರ್ಥ..
2. ಋಷಭದೇವನ ಮಗ ಭರತ ಚಕ್ರವರ್ತಿ ಆಳಿದ ಭೂಮಂಡಲವೇ ಭಾರತ ಎಂಬುದು ವಿಷ್ಣು ಪುರಾಣ, ವಾಯುಪುರಾಣ, ಬ್ರಹ್ಮಾಂಡ ಪುರಾಣ ಮತ್ತು ಭಾಗವತದಲ್ಲಿ ಇದೆ.
3. ಅತ್ಯಂತ ಪುರಾತನವಾದ ಋಗ್ವೇದದ ಒಂದನೇ ಮಂಡಲದಲ್ಲಿ ಬರುವ ಋಕ್ಕೊಂದು ಹೀಗಿದೆ– ಭಾರತೀ ಇಳೇ ಸರಸ್ವತಿ ಯಾ ವಃ ಸರ್ವಾ ಉಪಬ್ರುವೇ.... ಎನ್ನುತ್ತದೆ. ನಾಲ್ಕನೆ ಮಂಡಲದ ಋಕ್ಕಲ್ಲಿ ತಸ್ಮಾ ಅಗ್ನಿರ್ಭಾರತಃ ಎಂಬಲ್ಲಿ ಭಾರತಿಯನ್ನೇ ಭಾರತ ಎನ್ನಲಾಗಿದೆ. 'ಭಾ' ಎಂದರೆ ಸೂರ್ಯನನ್ನು ಕುರಿತದ್ದಾಗಿದೆ, 'ರತ' ಎನ್ನುವುದು ಪ್ರಭೆಯನ್ನು ಸೂಚಿಸುತ್ತದೆ. ಸೂರ್ಯನ ಶಕ್ತಿ ಭೂಮಿಗೆ ಆವಶ್ಯಕ, ಅದಿಲ್ಲದೆ ಜೀವಿಗಳಿಲ್ಲ. ಹಾಗೆಯೇ ಸೂರ್ಯ ಜ್ಞಾನದ ಪ್ರತೀಕ. ಇಂತಹ ಶಕ್ತಿಯೇ ಭಾರತ!. ಅಂದರೆ ಜಗತ್ತಿಗೇ ಬೆಳಕು ಕೊಡುವ ಭಾರತ, ಎಷ್ಟೊಂದು ಸುಂದರ ಹೆಸರು ಅಲ್ಲವೆ?.
4. ಋಗ್ವೇದದ ಪ್ರಕಾರ, ಭಾರತ ಎಂಬ ಜನಸಮುದಾಯವೂ ಇತ್ತು ಎಂಬುದು ತಿಳಿದುಬರುತ್ತದೆ.
5. ವಿಷ್ಣು ಪುರಾಣದಲ್ಲಿ ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಂ। ವರ್ಷ ತತ್ ಭಾರತಂ ನಾಮ ಭಾರತೀ ಯತ್ರ ಸಂತತಿಃ॥ ಅಂದರೆ– ಸಾಗರದಿಂದ ಉತ್ತರಕ್ಕೆ ಮತ್ತು ಹಿಮಾಲಯದಿಂದ ದಕ್ಷಿಣಕ್ಕೆ ಇರುವ ಭೂಮಿಗೆ "ಭಾರತ" ಎಂದು ಹೆಸರು. ಇದರ ಮಕ್ಕಳೇ ಭಾರತೀಯರು.
6. ಬ್ರಹ್ಮಾಂಡ ಪುರಾಣದಲ್ಲಿ ಉದ್ಧರಿಸಿದಂತೆ ಪೃಥಿವ್ಯಾಂ ಭಾರತಂ ವರ್ಷ ಕರ್ಮಭೂಮಿರುದಾಹೃತಾ –ಅಂದರೆ– ಜಗತ್ತಿನಲ್ಲಿ ಭಾರತವೇ ಕರ್ಮಭೂಮಿ ಎಂದು ತಿಳಿಯಲ್ಪಡುತ್ತದೆ.
7. ಮಹಾಭಾರತದಲ್ಲಿ ಹೇಳಿದಂತೆ ಅತ್ರಾಪಿ ಭಾರತಂ ಶ್ರೇಷ್ಠ ಜಂಬೂದ್ವೀಪೇ ಮಹಾಮುನೇ.. ಅಂದರೆ, ಜಂಬೂದ್ವೀಪ ವೆಂಬ ಜಗತ್ತಿನ ಭಾಗದಲ್ಲಿ ಭಾರತವು ಶ್ರೇಷ್ಠವಾದ ದೇಶವು.... ಇನ್ನೂ ಹಲವು ಪುರಾಣಗಳಲ್ಲಿ ಜಂಬೂದ್ವೀಪ, ಹಿಂದುಸ್ತಾನ, ಭರತವರ್ಷ ಮತ್ತು ಭಾರತದ ಬಗ್ಗೆ ವಿವರಣೆ ಸಿಗುತ್ತದೆ. ಜಂಬೂದ್ವೀಪ ಎಂಬ ಉಲ್ಲೇಖವು ಥೈಲ್ಯಾಂಡ್, ಮಲೇಷಿಯಾ ಕಾಂಬೋಡಿಯಾ, ಇಂಡೋನೇಷಿಯಾ ಮುಂತಾದ ದೇಶಗಳಲ್ಲಿ ಈಗಲೂ ಬಳಕೆಯಲ್ಲಿವೆ. ಒಂದು ಕಾಲದಲ್ಲಿ ಬಹುತೇಕ ಪೂರ್ವಾರ್ಧ ಗೋಲದಲ್ಲೆಲ್ಲಾ ಆರ್ಯ ಸಂಸ್ಕತಿ ಹರಡಿತ್ತೆಂದು ಚರಿತ್ರೆಯಿಂದ ತಿಳಿದುಬರುತ್ತದೆ.
8. ಸುಮಾರು 7000 ವರ್ಷಗಳ ಇತಿಹಾಸ ಹೊಂದಿರುವ ಉನ್ನತ ಆದರ್ಶ ಸಾಮಾಜಿಕ ಸಮಾನತೆ ಹೊಂದಿದ್ದ ವಿಶ್ವವೇ ಒಂದು ರಾಷ್ಟ್ರ ಎಂದು ಭಾವಿಸಿದ್ದ ಜಗತ್ತಿನ ಏಕೈಕ ಪುರಾತನ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ.
9. 'ಭಾ' ಅಂದರೆ ಜ್ಞಾನ, 'ರತ' ಎಂದರೆ ಆಸಕ್ತನಾಗುವವ. ಅಲ್ಲದೆ 'ರತ' ಎಂದರೆ ಸಂಪೂರ್ಣ ಸತ್ಯ ಎಂದೂ ಹೇಳಬಹುದು, ಅಂದರೆ ಜ್ಞಾನ ಮತ್ತು ಸತ್ಯದಲ್ಲಿ ಆಸಕ್ತನಾಗಿರುವವರು ಇರುವ ಪ್ರದೇಶವೇ ಭಾರತ, ಆಸಕ್ತರಾಗಿರುವವರೇ ಭಾರತೀಯರು.
10. ಭಾರತ ಎಂದರೆ ಸತ್ಯದ ರಕ್ಷಕ ಎಂದೂ ಅರ್ಥೈಸುವುದುಂಟು. ಸತ್ಯಮೇವ ಜಯತೆ ಎನ್ನುವುದು ಭಾರತದ ಧ್ಯೇಯ ವಾಕ್ಯವಲ್ಲವೆ?
11. ಭಾರತ ಎಂದರೆ ಭಾವ–ರಾಗ –ತಾಳ! ಎಲ್ಲ ವೈವಿಧ್ಯತೆಯ ನಡುವೆಯೂ ನಮ್ಮೆಲ್ಲರ ಭಾವ ಒಂದೇ! ರಾಗ ಒಂದೇ!!, ತಾಳ ಒಂದೇ!!!. ಅದಕ್ಕೇ ನಾವು ಭಾರತೀಯರು!.
12. ಭರತ ಎಂದರೆ ಉಕ್ಕುವುದು, ಅಂದರೆ ಯಾವ ಪ್ರದೇಶದಲ್ಲಿ ಜ್ಞಾನ ಸಂಸ್ಕೃತಿ ಉಕ್ಕಿ ಹರಿಯುತ್ತಿತ್ತೋ ಅದು ಭಾರತ.
13. ಈ ಭರತಖಂಡದಲ್ಲಿ ಹಿಂದೆ ಹಲವಾರು ಸ್ವತಂತ್ರ ರಾಜರುಗಳು ಆಳುತ್ತಿದ್ದರೂ ಭರತಖಂಡ ಒಂದೇ ರಾಷ್ಟ್ರವೆನಿಸಿತ್ತು. ನಾನಾ ರಾಜ್ಯಗಳ ಜನರ ಸಂಸ್ಕೃತಿ, ವಿಚಾರ,

ಪುಟ 10 ಕ್ಕೆ ➤

# 36 ನೇ ಪ್ರತಿಭಾ ಪುರಸ್ಕಾರ– ಬೆಂಗಳೂರು ದಕ್ಷಿಣ ಜಿಲ್ಲೆ

**ವಿದ್ವಾನ್ ಡಾ|| ವೆಂಕಟರಮಣ ದೇವರು ಭಟ್ಟ**
**ಪ್ರಧಾನಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ**



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ 2022 – 2023 ನೇ ಶೈಕ್ಷಣಿಕ ವರ್ಷದಲ್ಲಿ SSLC ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಶಾಲಾ ಪ್ರಥಮಿಗರನ್ನು, ದಿವ್ಯಾಂಗರನ್ನು, 90% ಹೆಚ್ಚು ಅಂಕ ಗಳಿಸಿದ ಶಿಕ್ಷಕರ ಮಕ್ಕಳನ್ನು ಗೌರವಿಸುವ 36 ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭವು ದಿನಾಂಕ: 06–08–2023ರಂದು ಭಾನುವಾರ ಲೋಟಸ್ ಕನ್ವೆನ್ಷನ್ ಸೆಂಟರ್ ರಾಮಮೂರ್ತಿ ನಗರದಲ್ಲಿ ಎಲ್ಲರ ಸಹಕಾರದಿಂದ ಯಶಸ್ವಿಯಾಗಿ ನೆರವೇರಿತು.

ಶ್ರೀವುತಿ ವಾಂಯಾ ಪುಭುರವರ ಸರಸ್ವತಿಯು ಪ್ರಾರ್ಥನೆಯೊಂದಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು 10.30 ಕ್ಕೆ ಸರಿಯಾಗಿ ಶುಭಾರಂಭಗೊಂಡಿತು.

ಬೆಂಗಳೂರು ದಕ್ಷಿಣ ಜಿಲ್ಲೆಯ ಮಹಿಳಾ ಪ್ರಮುಖರಾದ ಶ್ರೀಮತಿ ಧನಲಕ್ಷ್ಮೀರವರು ಗಣ್ಯರ ಪರಿಚಯ ಮಾಡಿ ಸ್ವಾಗತ ಕೋರಿದರು. ಅನಂತರ ವೇದಿಕೆಯ ಮೇಲೆ ಉಪಸ್ಥಿತರಿದ್ದ ಗೌರವಾನ್ವಿತ ಅಭ್ಯಾಗತರು ದೀಪಪ್ರಜ್ವಲನೆ ಮತ್ತು ಸರಸ್ವತಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಶುಭಕೋರಿದರು.

ಬೆಂಗಳೂರು ದಕ್ಷಿಣ ವಿಭಾಗದ ಪ್ರಮುಖರಾದ ಶ್ರೀ ಬಿ.ಎ. ಸುರೇಂದ್ರರವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಘ ಬೆಳೆದು ಬಂದ ಹಾದಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗಾಗಿ ಸಂಘದ ವಿವಿಧ ಕಾರ್ಯಕ್ರಮಗಳು, ಪ್ರತಿಭಾಪುರಸ್ಕಾರದ ಹಿನ್ನೆಲೆ ಮತ್ತು ಮಹತ್ವವನ್ನು ತಿಳಿಸಿಕೊಟ್ಟರು. ರಾಜ್ಯ ಸಹಕಾರ್ಯದರ್ಶಿ ಯವರಾದ ಶ್ರೀ ಗಂಗಾಧರಾಚಾರಿ ರವರು ಪುರಸ್ಕಾರ ಸ್ವೀಕರಿಸಲಿರುವ ವಿದ್ಯಾರ್ಥಿಗಳಿಗೆ ಸಂಕಲ್ಪ ಬೋಧನೆ ಮಾಡಿದರು.

ಮುಖ್ಯ ಅತಿಥಿಗಳಾದ ಮಾನ್ಯ ಶಾಸಕರು ಮತ್ತು ಮಾಜಿ ನಗರಾಭಿವೃದ್ಧಿ ಸಚಿವರು ಶ್ರೀ ಬೈರತಿ ಬಸವರಾಜು ರವರು ದಿವ್ಯಾಂಗ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಮತ್ತು ಅವರ ಮಕ್ಕಳಿಗೆ ಸ್ಮರಣಿಕೆ, ಪುಸ್ತಕಗಳು, ಪ್ರಶಸ್ತಿಪತ್ರವನ್ನು ನೀಡಿ ಸತ್ಕರಿಸಿ ಸಂಘದ ಕಾರ್ಯವನ್ನು ಪ್ರಶಂಸಿಸಿ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿರಲೆಂದು ಹಾರೈಸಿದರು.

ಗೌರವ ಅತಿಥಿಗಳಾಗಿ ಆಗಮಿಸಿದ್ದ ಡಾ॥ಖ॥ ಜೋಸೆಫ್ ವಿ.ಜಿ., ಕುಲಪತಿಗಳು ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ರವರು ವಿದ್ಯಾರ್ಥಿಗಳನ್ನು ಪುರಸ್ಕರಿಸಿ ಮಾತನಾಡುತ್ತ ಈ ದೇಶದ ಪರಂಪರೆಯನ್ನು ಸ್ಮರಿಸುತ್ತ ಇಂದಿನ ವಿದ್ಯಾರ್ಥಿಗಳಿಗೆ ಅಪಾರ ಅವಕಾಶಗಳಿದ್ದು ಶ್ರದ್ಧೆಯಿಂದ ಓದಿ ಗುರಿ ಮುಟ್ಟಲು ಪ್ರಯತ್ನಿಸುವಂತೆ ಕರೆನೀಡಿದರು. ಶ್ರೀ ಚಂದ್ರಕಾಂತ ಕೋನಿಡೆಲ, ವ್ಯವಸ್ಥಾಪಕ ನಿರ್ದೇಶಕರು ನವಜ್ಯೋತಿ ಶೆಲ್ಟರ್ಸ್ ಪ್ರೈವೇಟ್ ಲಿಮಿಟೆಡ್‌ರವರು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಿ ಮಾತಾಡುತ್ತ ಜೀವನದಲ್ಲಿ ಸಾಧನೆ ಮಾಡಲು ಶಿಕ್ಷಣವು ಪ್ರಮುಖ ಸ್ಥಾನವನ್ನು ಪಡೆದಿದೆ. ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಉನ್ನತ ಅಧ್ಯಯನ ಮಾಡಬೇಕು, ಉತ್ತಮ ಸಂಸ್ಕಾರಗಳನ್ನು ರೂಢಿಸಿಕೊಂಡು ಸಮಾಜ ಸೇವೆ ಮಾಡ ಬೇಕೆಂದು ತಿಳಿಸಿದರು. ಡಾ. ಜ್ಯೋತಿ ವೆಂಕಟೇಶ್ ಡೀನ್ ಕಲಾವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯರವರು ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡುತ್ತ ಶಿಕ್ಷಣದ ಮಹತ್ವವನ್ನು ವಿವರಿಸಿ ಪ್ರಪಂಚಕ್ಕೆ ನಮ್ಮ ಭಾರತ ದೇಶದ ಜ್ಞಾನ–ವಿಜ್ಞಾನದ ಕೊಡುಗೆಯನ್ನು ಸ್ಮರಿಸಿ, ಸಂಘದ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಜಿ. ಲಕ್ಷ್ಮಣ್, ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಎ.ಬಿ.ಆರ್.ಎಸ್.ಎಂ. ದೆಹಲಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಈ ದೇಶದ ಸನಾತನ ಪರಂಪರೆ ಅತ್ಯಂತ ಶ್ರೇಷ್ಠವಾದದ್ದು, ಪ್ರಪಂಚಕ್ಕೆ ಜ್ಞಾನದ ಮಾರ್ಗದರ್ಶನ ಮಾಡಿದ ವಿಶ್ವಗುರು ಈ ನಮ್ಮ ದೇಶ. ಅನೇಕ ಮಹಾಪುರುಷರು ಈ ದೇಶದಲ್ಲಿ ಉತ್ತಮ ಸಂಸ್ಕೃತಿ–ಸಂಸ್ಕಾರವನ್ನು ಕಟ್ಟಿಕೊಟ್ಟಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮ ಆಂದೋಲನದಲ್ಲಿ ದೇಶಕ್ಕಾಗಿ ಲಕ್ಷಾಂತರ ಜನ ರಕ್ತಹರಿಸಿ ಪ್ರಾಣ ಕಳೆದು ಕೊಂಡಿದ್ದಾರೆ. ಅವರೆಲ್ಲರ ತ್ಯಾಗ ಬಲಿದಾನಗಳ ಋಣ ನಮ್ಮ ಮೇಲೆ ಇದೆ. ಈ ದೇಶದ ಸಮಗ್ರ ಅಭಿವೃದ್ಧಿಗಾಗಿ ಯುವ ಜನತೆ ಶ್ರಮಿಸಬೇಕಿದೆ, ದೇಶಭಕ್ತ ವಿದ್ಯಾರ್ಥಿಗಳ ಜವಾಬ್ದಾರಿಯನ್ನು ವಿವರಿಸಿ, ಶ್ರೇಷ್ಠ ಮತ್ತು ಬಲಿಷ್ಠ ಭಾರತವನ್ನು ನಿರ್ಮಿಸಲು ಸಮಯವನ್ನು ಕೊಟ್ಟು ಶ್ರಮಿಸಬೇಕಿದೆ ಎಂದು ಪ್ರೇರಣಾದಾಯಕ ನುಡಿಗಳ ಮೂಲಕ ತಿಳಿಸಿದರು.

ಕಾರ್ಯಕ್ರಮದ ಯಶಸ್ಸಿಗಾಗಿ ಸಹಕರಿಸಿದ ಎಲ್ಲ ದಾನಿಗಳಿಗೆ ಶ್ರೀ ವಿಜಯ ಕುಮಾರ್‌ರವರು ಕೃತಜ್ಞತೆ ಸಲ್ಲಿಸಿದರು. ದಕ್ಷಿಣ ಜಿಲ್ಲೆಯ ಅಧ್ಯಕ್ಷರಾದ ವಿದ್ವಾನ್ ನಾರಾಯಣ ಭಟ್ಟರವರು ವಂದನಾರ್ಪಣೆ ಸಲ್ಲಿಸಿದರು. ಕು. ವೇದಶ್ರೀರವರ ವಂದೇ ಮಾತರಂ ಗಾಯನದೊಂದಿಗೆ ಕಾರ್ಯಕ್ರಮ ಪೂರ್ಣಗೊಂಡಿತು. ದಕ್ಷಿಣ ಜಿಲ್ಲೆಯ ಕಾರ್ಯದರ್ಶಿಗಳಾದ ಡಾ. ವೆಂಕಟರಮಣ ದೇವರು ಭಟ್ಟರವರು ಸಮಗ್ರ ಕಾರ್ಯಕ್ರಮದ ನಿರೂಪಣೆ ಮಾಡಿದರು.

ಸಂಘದ ಪೋಷಕರಾದ ಶ್ರೀ ಹೆಚ್. ನಾಗಭೂಷಣರಾವ್ ರವರು ಬೆಂಗಳೂರು ದಕ್ಷಿಣ ವಿಭಾಗದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು. ಎಲ್ಲ ಹಿರಿಯರ, ಸಂಘದ ಪದಾಧಿಕಾರಿಗಳ, ಶಿಕ್ಷಕಮಿತ್ರರ, ಹಿತೈಷಿಗಳ ಸಹಾಯ ಸಹಕಾರದಿಂದ ಪ್ರತಿಭಾ ಪುರಸ್ಕಾರ ಸಮಾರಂಭವು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು. ●

➢ ಪುಟ 5 ರಿಂದ.....

## ಏಕರೂಪ ನಾಗರೀಕ ಸಂಹಿತೆಯ ಪ್ರಯೋಜನಗಳು

- **ರಾಷ್ಟ್ರೀಯ ಏಕೀಕರಣ ಮತ್ತು ಜಾತ್ಯಾತೀತತೆಯ ಸಾಕಾರ:–** ವೈಯಕ್ತಿಕ ಕಾನೂನುಗಳಿಂದ ಉಂಟಾಗಬಹುದಾದ ಅಂತಃಧಾರ್ಮೀಯ ವಿವಾದಗಳನ್ನು ಕಡಿಮೆ ಮಾಡುತ್ತದೆ. ಸಂವಿಧಾನದ ಸಮಾನತೆ ಮತ್ತು ಭ್ರಾತೃತ್ವ ಮೌಲ್ಯಗಳನ್ನು ಸಾಕಾರಗೊಳಿಸುತ್ತದೆ.
- **ಲಿಂಗ ನ್ಯಾಯ ಮತ್ತು ಸಮಾನತೆ:–** ಮದುವೆ, ಉತ್ತರಾಧಿಕಾರ, ದತ್ತು, ಜೀವನಾಂಶ ಮುಂತಾದವುಗಳಲ್ಲಿ ಪುರುಷರಷ್ಟೇ, ಮಹಿಳೆಯರಿಗೆ ಹಕ್ಕು, ಇದರಿಂದ ಲಿಂಗ ನ್ಯಾಯ ಮತ್ತು ಸಮಾನತೆಯನ್ನು ಸಾಕಾರಗೊಳಿಸುವುದು.
- **ಕಾನೂನು ವ್ಯವಸ್ಥೆಯ ಸರಳೀಕರಣ ಮತ್ತು ತರ್ಕಬದ್ಧಗೊಳಿಸುವಿಕೆ:–** ಇದು ಸಿವಿಲ್ ಮತ್ತು ಕ್ರಿಮಿನಲ್ ಕೋಡ್‌ಗಳನ್ನು ಸಮನ್ವಯಗೊಳಿಸುತ್ತದೆ.
- **ಅಂಧ ಅಭ್ಯಾಸಗಳನ್ನು ತೊಡೆದು ಹಾಕುವುದು:–** ಭಾರತೀಯ ಸಂವಿಧಾನದಲ್ಲಿ ಸ್ಥಾಪಿಸಲಾದ ಮಾನವ ಹಕ್ಕುಗಳು ಮತ್ತು ಮೌಲ್ಯಗಳಿಗೆ ವಿರುದ್ಧವಾದ ತ್ರಿವಳಿ ತಲಾಕ್, ಬಹುಪತ್ನಿತ್ವ, ಬಾಲ್ಯವಿವಾಹ ಮುಂತಾದ ಅಂಧ ಆಚರಣೆಗಳನ್ನು ಕೊನೆಗೊಳಿಸುತ್ತದೆ.

ಏಕರೂಪ ನಾಗರೀಕ ಸಂಹಿತೆಯನ್ನು ವಿರೋಧಿಸುತ್ತಿರುವ ಇಸ್ಲಾಮಿಕ್ ಮತ್ತು ಕಮ್ಯುನಿಷ್ಟರು ತಮ್ಮ ಸ್ವಹಿತಾಸಕ್ತಿಗಳಿಂದ ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುತ್ತಿದ್ದಾರೆ. ಒಂದೇ ಕುಟುಂಬದಲ್ಲಿರುವ ನಾಲ್ಕಾರು ಜನಕ್ಕೆ ನಾಲ್ಕಾರು ಕಾನೂನುಗಳಿದ್ದರೆ, ಅಂತಹ ಕುಟುಂಬ ಯಾವತ್ತು ಸಹ ಪ್ರಗತಿಪರತೆಯನ್ನು ಸಾಧಿಸಲು ಆಗವುದಿಲ್ಲ. ಇಂದು ಇಂತಹದೇ ಪರಿಸ್ಥಿತಿಯಲ್ಲಿ ಭಾರತವಿದೆ. ಏಕರೂಪ ನಾಗರೀಕ ಸಂಹಿತೆಯಂತಹ ಕಾನೂನುಗಳು ರಾಜಕೀಯ ಕೆಸರಿನಾಟದಲ್ಲಿ ಸಿಲುಕಿ ನಲುಗುತ್ತಿರುವುದು, ನಮ್ಮ ಮುಂದಿರುವ ದೌರ್ಭಾಗ್ಯ ಎಂದರೆ ಅತಿಶಯೋಕ್ತಿಯಲ್ಲ. ಗೋವಾದಂತಹ ಪುಟ್ಟ ರಾಜ್ಯಕ್ಕೆ ಏಕರೂಪ ನಾಗರೀಕ ಸಂಹಿತೆಯನ್ನು ಜಾರಿಗೊಳಿಸುವುದು ಸಾಧ್ಯವಾದರೆ ನಮಗೇಕೆ ಸಾಧ್ಯವಿಲ್ಲ? ಶಾ ಬಾನೋ ಕೇಸ್, ಸರಳ ಮುದ್ಗಲ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಮುಂತಾದ ತೀರ್ಪುಗಳಲ್ಲಿ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಏಕರೂಪ ನಾಗರೀಕ ಸಂಹಿತೆಯನ್ನು ಬೆಂಬಲಿಸಿದೆ. ಆದರೂ ಇದರ ಅನುಷ್ಠಾನ ಕ್ಲಿಷ್ಟವಾಗಿರುವುದು ದುರ್ದೈವವೇ ಆಗಿದೆ. ಭಾರತ ಸಂವಿಧಾನದ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಕೂಡ ಇದರ ಬಗ್ಗೆ ಅಂದೇ ಎಚ್ಚರಿಸಿದ್ದರೂ ಸಹ ನಾವುಗಳು ಪ್ರಬುದ್ಧರಾಗಲಿಲ್ಲ ಎಂಬುದೇ ದುರಂತವಾಗಿ ಪರಿಣಮಿಸಿದೆ.

ಸದೃಢ ಭಾರತ, ಅಮೃತ ಕಾಲದ ಭಾರತ, ವಿಶ್ವಗುರು ಭಾರತದ ಸಂಕಲ್ಪದಲ್ಲಿ ನಾವೆಲ್ಲ ನಮ್ಮಗಳ ಸ್ವಹಿತಾಸಕ್ತಿ ಮತ್ತು ಸ್ವಾರ್ಥ ಮನೋಭಾವದಿಂದ ಮುಕ್ತರಾಗಿ ರಾಷ್ಟ್ರವನ್ನು ಪ್ರಗತಿಪಥದತ್ತ ಸಾಗಲು ನೆರವಾಗೋಣ. 'ಸಂಕುಚಿತತೆಯಿಂದ ವಿಶಾಲ ದೃಷ್ಟಿಯತ್ತ ಸಾಗೋಣ', 'ಒಂದೇ ರಾಷ್ಟ್ರ, ಒಂದೇ ಕಾನೂನು' ಎಂಬುದನ್ನು ಅರಿತು ಪ್ರಜ್ಞಾವಂತ ನಾಗರೀಕರಾಗೋಣ.

●

### ಓದುಗರ ಸ್ಪಂದನೆಗಳು

**ನಿಜವಾಗಲು ಅದ್ಭುತ ಲೇಖನ, ಮಣಿಪುರದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ, ಈ ಲೇಖನದಿಂದ ಅರಿವಾಯಿತು.**

– **ಶ್ರೀಮತಿ ಪ್ರಭಾವತಿ,** ಮುಖ್ಯಶಿಕ್ಷಕರು, ತುಂಗಣಿ

**ಮಣಿಪುರದ ಬಗ್ಗೆ ಮತ್ತು ಅಲ್ಲಿಯ ಸಂಘರ್ಷದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಓಡಾಡುವ ಮಾಹಿತಿಗಿಂತ ಈ ಲೇಖನ ಅತ್ಯುತ್ತಮವಾಗಿದೆ.**

– **ಸಿ. ಪುಟ್ಟ ಸ್ವಾಮಿ,** ಸಾಹಿತಿಗಳು

**ತುಂಬಾ ಮಾಹಿತಿ ಪೂರ್ಣ ಲೇಖನ.**

– **ಡಾ॥ ಬಸವರಾಜ ಬಿರಾದಾರ್,**
ಪ್ರಾಚಾರ್ಯರು, ಕಲಗಟಗಿ

### ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

**D.P.I. (Special) ಅವರ ಆದೇಶ ಸಂಖ್ಯೆ T3-LBS-RKM–7/79–80 ದಿನಾಂಕ 20–6–1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.**

**ಏಕಾತ್ಮತಾ ಸ್ತೋತ್ರವು ಮುಂದಿನ ಸಂಚಿಕೆಯಲ್ಲಿ...**

➢ ಪುಟ 6 ರಿಂದ.....

ಗೀತೆಯ ತಾತ್ಪರ್ಯ ಮನನ ಮಾಡಿಕೊಂಡಳು. ಮಧ್ಯದಲ್ಲಿ ತೀವ್ರ ಅನಾರೋಗ್ಯಕ್ಕೆ ಒಳಗಾದಾಗ ರಮಣ ಮಹರ್ಷಿಯವರ ಬಳಿ ಅವರ ಸಹೋದರ ಕಳುಹಿಸಿದರು. ಅರುಣಾಮಲೈ ನಾಗಮ್ಮನಿಗೆ ರಮಣರೇ ಗುರುಗಳಾದರು. ಅವಳ ಆಧ್ಯಾತ್ಮ ಪ್ರಜ್ಞೆ ಅರಳತೊಡಗಿತು. 1945ರಿಂದ 1950ರವರೆಗೆ ಅಣ್ಣನಿಗೆ ಪತ್ರ ಮುಖೇನ ರಮಣರ ಆದರ್ಶಗಳನ್ನು, ಪ್ರವಚನಗಳನ್ನು ಕಳುಹಿಸಿದರು. ಈ ಪತ್ರಗಳೇ ಭಾರತೀಯ ತತ್ವಶಾಸ್ತ್ರ. ನವೋದಯ ಪತ್ರಿಕೆಯಲ್ಲಿ 273 ಕಂತುಗಳಲ್ಲಿ "ಶ್ರೀ ರಮಣಾಶ್ರಮ ಲೇಖಲು" ಎಂಬ ಅಂಕಣದಲ್ಲಿ ಪ್ರಕಟವಾಯಿತು. ಇದನ್ನು ನಾಗಮ್ಮನ ಅಣ್ಣ "Letters from Sri Ramanasram" ಎಂಬ ಪುಸ್ತಕ ಪ್ರಕಟಿಸಿದರು. ರಮಣರ ವಿದೇಶಿ ಭಕ್ತರು ಕೂಡ ಈ ಪುಸ್ತಕಕ್ಕೆ ಮಾರುಹೋದರು. ಇದೇ ಹೆಸರಿನ ಮೂರು ಪುಸ್ತಕಗಳು ಇಂಗ್ಲೀಷ್‌ನಲ್ಲಿ ಪ್ರಕಟವಾಗಿ ಜನ ಮನ್ನಣೆ ಪಡೆದವು. ಸ್ತ್ರೀಯು ವ್ಯಕ್ತಿರೂಪದಲ್ಲಿ ಒಂದು ರಾಷ್ಟ್ರವಷ್ಟೇ ಅಲ್ಲ ವಿಶ್ವದ ಚೇತನ ಎನ್ನುವುದಕ್ಕೆ ಸೂರಿ ನಾಗಮ್ಮ ಸಾಕ್ಷಿಯಾಗಬಲ್ಲಳು.

ಇನ್ನು ಪ್ರಸಕ್ತ ವಿದ್ಯಮಾನದ ಕಡೆ ಗಮನ ಹರಿಸಿದರೆ, ಅಮೃತ ಮಹೋತ್ಸವದ ಮೊದಲ ವರ್ಷದಲ್ಲಿ ನಾರಿಶಕ್ತಿಯು ಪುಟಿದೆದ್ದ ತನ್ನ ಭೂಮಿಕೆಯ ಅತ್ಯುನ್ನತ ಮಟ್ಟವನ್ನು ಇಡೀ ವಿಶ್ವಕ್ಕೆ ತೋರಿಸಿ ಮಾದರಿ ಸ್ಥಾನದಲ್ಲಿ ನಿಂತಿದೆ.

"Women Power in Breaking Barriers" ಎನ್ನುವ ಟಿ.ವಿ ಸಂದರ್ಶನದಲ್ಲಿ Thushina Takur, Vanika - Singh ಮೊದಲಾದವರು front line ಸ್ಥಾನದಲ್ಲಿದ್ದಾರೆ.

ISRO ಚಂದ್ರಯಾನ–3ರ ಉಡಾವಣೆಯ ಕಾರ್ಯದಲ್ಲಿ ಮಹಿಳಾ ವಿಜ್ಞಾನಿಗಳ ಸಾಧನೆ, ಸಹಕಾರ ಗಣನೀಯವಾಗಿದೆ. ರಾಕೆಟ್ ವಿಮೆನ್ ಎಂದು ಕರೆಯುವ ರಿತು ಕರಿದಾಲ್, ಸುಮನ್ ವಾಲ್ಕೆ, ಹಾಗೂ ಬಾಳೆಹೊನ್ನೂರಿನ ಡಿ.ಕೆ ನಂದಿನಿ ಮೊದಲಾದ 54 ಮಹಿಳಾ ವಿಜ್ಞಾನಿಗಳು ಈ ಚಂದ್ರಯಾನ–3ರ ಗುಂಪಿನಲ್ಲಿ ಕೆಲಸ ಮಾಡಿದ್ದಾರೆ.

ಸಮಾಜ ನಿರ್ಮಾಣದಲ್ಲಿ ತನ್ನ ಭೂಮಿಕೆಯನ್ನು ಮಹತ್ವ ಪೂರ್ಣ ಸ್ಥಿತಿಯಲ್ಲಿರಿಸಿಕೊಂಡು ಇಡೀ ವಿಶ್ವಕ್ಕೆ ಮಾದರಿಯಾಗಿ ನಿಂತಿರುವುದಕ್ಕೆ ISRO ನ ಮಹಿಳಾ ವಿಜ್ಞಾನಿಗಳೇ ಸಾಕ್ಷಿ.

ನಾರೀಶಕ್ತಿ – ಅಮರ್ ರಹೇ ಭಾರತದ ಆಧಾರವೇ ಆಗಿರುವ ನಾರೀಶಕ್ತಿಗೆ ನಮೋ ನಮಃ

ತೊಟ್ಟಿಲು ತೂಗುವ ಕೈ ದೇಶವನ್ನೇ ಆಳಬಹುದು ಎನ್ನುತಿದ್ದ ಕಾಲವಿತ್ತು ಆದರೆ ಈಗ ತೊಟ್ಟಿಲು ತೂಗುವ ಕೈ ಚಂದ್ರನನ್ನೇ ತಲುಪಬಲ್ಲದು, ಹೊಸ ಇತಿಹಾಸವನ್ನು ಬರೆಯಬಲ್ಲದು, ಇಡೀ ವಿಶ್ವಕ್ಕೆ ಮುಂದಿನ ಸಾವಿರ ವರ್ಷದ ಇತಿಹಾಸಕ್ಕೆ ನಾಂದಿಯಾಗಬಲ್ಲದು, ಇಡೀ ಇಸ್ರೋ ವಿಜ್ಞಾನಿಗಳ ಸಮುದಾಯಕ್ಕೆ ಶರಣು ಶರಣೆಂದೆ.

ಭಾರತೀಯ ನಾರೀ, ನೀನೇ ಇತರರಿಗೆ ದಾರಿ ●

➢ ಪುಟ 7 ರಿಂದ.....

ನಂಬಿಕೆ ಇವುಗಳಲ್ಲಿ ಏಕಸೂತ್ರತೆ ಸ್ಥಿರವಾಗಿ ನೆಲೆಸಿತ್ತು ಹಾಗಾಗಿ ಈ ಸಮುದಾಯ ಹೊಂದಿರುವ ಈ ನೆಲ ಒಂದು ರಾಷ್ಟ್ರ ಭಾರತ ರಾಷ್ಟ್ರ.

14. ಮಾತಾ ಭೂಮಿಃ ಪುತ್ರೋಹಂ ಪ್ರಥಿವ್ಯಾಃ–ಅಂದರೆ ಈ ಭೂಮಿ ನಮಗೆ ತಾಯಿ, ನಾವು ಅವಳ ಮಕ್ಕಳು ಎಂಬುದಾಗಿ ತಾಯಿ ಭಾರತಿಯನ್ನು ಪೂಜಿಸುವವರು ನಾವು.
15. ಶ್ರೀ ರಾಮ ಎಂದಂತೆ ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ (ತಾಯಿ ಮತ್ತು ಮಾತೃಭೂಮಿ ನಮಗೆ ಸ್ವರ್ಗಕ್ಕಿಂತ ದೊಡ್ಡದು) ಎಂದು ನಂಬಿ ಆಚರಿಸುವ ಭಾರತೀಯರು ನಾವು.

ಇನ್ನು ಇಂಡಿಯಾ ಹೆಸರಿಗೆ ಬರೋಣ. ಭಾರತದ ಉತ್ತರದಲ್ಲಿ ಹರಿಯುವ ಸಿಂಧು ನದಿಗೆ ಪರ್ಷಿಯನ್ನರು ಹಿಂದು ಎಂದರೆ ಗ್ರೀಕರು hindus ಎಂಬಲ್ಲಿ h ತೆಗೆದು Indus ಎಂದರು ಮತ್ತು ನಂತರ ರೋಮನ್ ಮತ್ತು ಬ್ರಿಟೀಷರು ಇಡೀ ಭಾರತ ಉಪಖಂಡದ ಜನರನ್ನು ಇಂಡಿಯನ್ಸ್ ಎಂದು ಕರೆದು, ಈ ಭೂ ಭಾಗವನ್ನು ಇಂಡಿಯಾ ಎಂದು ಕರೆದರು. ಅಂದರೆ ಸಿಂಧು–ಇಂಡಸ್ ನದಿಬಯಲಲ್ಲಿ ವಾಸಿಸುವ ಜನ ಅಷ್ಟೇ ಇಂಡಿಯಾ ಹೆಸರಿನ ಅರ್ಥ!. ಇದನ್ನೇ ಭಾರತ ಸ್ವಾತಂತ್ರ್ಯವಾದಾಗ ನಮ್ಮ ನವರಾಷ್ಟ್ರ ನಿರ್ಮಾತೃಗಳು ಒಪ್ಪಿ ಇಂಡಿಯಾ, ದಟ್ ಈಸ್ ಭಾರತ್ ಎಂದು ಹೆಸರಿಟ್ಟರು!.

ಹೀಗೆ ಭಾರತ ಎಂಬುದು ನಮ್ಮ ಧರ್ಮ, ಸಂಸ್ಕೃತಿ, ಪೌರಾಣ, ಇತಿಹಾಸ, ಹಿರಿಮೆ, ಗರಿಮೆ, ಪ್ರಾಚೀನತೆಯನ್ನು ಪ್ರತಿನಿಧಿಸುತ್ತದೆ ಮತ್ತು ಅದಕ್ಕೆ ಐದು ಸಾವಿರದಿಂದ ಹತ್ತು ಸಾವಿರ ವರ್ಷಗಳ ಇತಿಹಾಸವಿದೆ!. ಆದರೆ, ಇಂಡಿಯಾ ಎಂಬುದು ಪರಕೀಯರ ಭಾಷೆಯಲ್ಲಿ ಒಂದು ನದಿ ಪ್ರದೇಶವನ್ನು ಪ್ರತಿನಿಧಿಸುತ್ತದೆ!. ಹೀಗೆ ಇಂಡಿಯಾ ಎಂಬುದು ಅರ್ಥವಿಲ್ಲದ ಅಪ್ರಸ್ತುತವಾದ, ಇತ್ತೀಚಿನ ಗುಲಾಮಿ ಸಂಕೇತದ ಹೆಸರಾದರೆ ಭಾರತ ಎಂಬುದು ಪ್ರಾಚೀನವಾದ, ವಿಶಾಲ ಅರ್ಥದ ಅದ್ಭುತ ಹೆಸರು!. ಸ್ವಾತಂತ್ರ್ಯಾನಂತರವಾದರೂ ನಮ್ಮ ದೇಶದ ಹೆಸರನ್ನು ಮೊದಲಿನಂತೆ ಭಾರತ ಎಂದು ಬದಲಾಯಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಆದರೆ ಆ ಆಶಾಭಾವನೆ ಇಲ್ಲ. ಈಗ ಬದಲಾಯಿಸಲು ಹೋದರೆ ಅದಕ್ಕೆ ಕೋಮು ಬಣ್ಣ ಬಳಿದು ಗಲಾಟೆ ಮಾಡಬಹುದು!. ಭಾರತದ ಸ್ವಾತಂತ್ರ್ಯ ಚಳುವಳಿಯ ಒಕ್ಕೂರಲ ದೇಶಭಕ್ತಿಯ ಘೋಷಣೆಗಳಾದ ಭಾರತ್ ಮಾತಾ ಕೀ ಜೈ, ವಂದೇಮಾತರಂ ಎಂಬುದೂ ಈಗ ಜಾತ್ಯಾತೀತೆಗೆ ವಿರುದ್ಧ ಎಂಬಂತ ಬಲವಾದ ಸಿದ್ಧಾಂತ ಶುರುವಾಗಿದೆಯಲ್ಲ!. ಅನಿವಾರ್ಯವಾಗಿ ನಾವು ಇಂಡಿಯಾ ಎಂಬ ಹೆಸರಿಗೆ ಒಗ್ಗಿ ಹೋಗಿದ್ದೇವೆ. ಇರಲಿ, ನಾವು ಇಂಡಿಯಾ ಎಂದರೆ ಭಾರತ ಎಂದೇ ತಿಳಿದು ದೇಶದ ಬಗ್ಗೆ ಹೆಮ್ಮೆ ಪಡೋಣ. ಆದರೂ ಭಾರತ ಎಂದು ಮರುನಾಮಕರಣ ಆಗುತ್ತೆ ಎಂಬ ಒಂದು ಸಣ್ಣ ಆಸೆ ಇನ್ನೂ ಇದೆ! ●

# ಬಹುರತ್ನಾ ವಸುಂಧರಾ

# ಪದ್ಮಾವತಿ ಬಿದರಿ ಮತ್ತು ಟಿ. ಸುನಂದಮ್ಮ

ಪದ್ಮಾವತಿ ಬಿದರಿ ಕರ್ನಾಟಕದ ಅಷ್ಟೇ ಅಲ್ಲ, ಭಾರತದ ಅತ್ಯಂತ ಧೈರ್ಯಶಾಲಿ ಸ್ವಾತಂತ್ರ್ಯ ಹೋರಾಟಗಾರ್ತಿ ಎನಿಸಿಕೊಂಡಿದ್ದಾಳೆ. ಜೊತೆಗೆ ಸಮಾಜ ಸುಧಾರಕಿಯೂ ಆಗಿ, ವಿಶೇಷವಾಗಿ ಮಹಿಳೆಯರ ಪರವಾಗಿ ಹಲವಾರು ಸುಧಾರಣಾ ಕಾರ್ಯಗಳನ್ನು ಮಾಡಿದವಳು.

1915 ರಲ್ಲಿ ಬೆಳಗಾವಿ ಜಿಲ್ಲೆಯ ಹುಲಿಕುಂಟೆ ಎಂಬ ಸಣ್ಣಹಳ್ಳಿ ಇವರ ಜನ್ಮಸ್ಥಳ. ಕುಟುಂಬದವರೆಲ್ಲರೂ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದವರೇ. ಹಾಗಾಗಿ ಬಾಲ್ಯದಿಂದಲೂ ದೇಶಭಕ್ತಿ, ದೇಶಸೇವೆ ಎಂಬುದರ ಮೂಲಪಾಠಗಳನ್ನು ಮೈದುಂಬಿಸಿಕೊಂಡೇ ಬೆಳೆದಿದ್ದರು, ಪದ್ಮಾವತಿ. ಅದರಿಂದ ಚಿಕ್ಕವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಲು ಪ್ರೇರಣೆಸಿಕ್ಕಿತ್ತು.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಪದ್ಮಾವತಿಯವರ ಕೊಡುಗೆ ಮಹತ್ತ್ವದ್ದಾಗಿತ್ತು. ಅವರು ಅನೇಕ ಸಂದರ್ಭಗಳಲ್ಲಿ ತೆಗೆದುಕೊಳ್ಳುತ್ತಿದ್ದ ಕಠಿಣ ನಿರ್ಣಯಗಳು ಚಳುವಳಿಯ ತೀವ್ರತೆಗೆ ಪೂರಕವಾಗಿರುತ್ತಿದ್ದುದರಿಂದ ಬ್ರಿಟಿಷರಿಗೆ ದೊಡ್ಡತಲೆನೋವೇ ಆಗಿದ್ದರು. ಮತ್ತು ತಾವು ನಡೆಸುತ್ತಿದ್ದ ಕಾರ್ಯದಲ್ಲಿ ಅವರ ಬದ್ಧತೆ ಅಪಾರವಾಗಿರುತ್ತಿತ್ತು. ಅದರಿಂದ ಬ್ರಿಟಿಷ್ ವಸಾಹತುಶಾಹಿ ಅಧಿಕಾರಿಗಳಿಂದ ಅವರಿಗೆ ಕಿರುಕುಳದೊಂದಿಗೆ ಬಂಧನಕ್ಕೆ ಒಳಗಾಗುವಂತಾಗಿತ್ತು.

1947 ರಲ್ಲಿ ದೇಶವು ಸ್ವತಂತ್ರವಾದ ನಂತರ ಪದ್ಮಾವತಿ ರಾಜಕೀಯಕ್ಷೇತ್ರವಲ್ಲದೆ ಸಾಮಾಜಿಕವಾಗಿಯೂ ಅನೇಕ ಚಟುವಟಿಕೆಗಳಲ್ಲಿ ಕಾರ್ಯಪ್ರವೃತ್ತರಾದರು. ಮುಖ್ಯವಾಗಿ ಮಹಿಳೆಯರ ಹಕ್ಕುಗಳನ್ನು ಉತ್ತೇಜಿಸಲು ಮುಂದಾದರು. ಮಹಿಳೆಯರಿಗೆ ಆಗುತ್ತಿದ್ದ ಸಾಮಾಜಿಕ ಅನ್ಯಾಯಗಳನ್ನು ತೊಡೆದುಹಾಕಲು ಪ್ರಯತ್ನಿಸಿದರು. ಬಾಲ್ಯವಿವಾಹ, ವರದಕ್ಷಿಣೆ ಪಿಡುಗು ಮುಂತಾದ ಸಾಂಪ್ರದಾಯಿಕ ಕಟ್ಟುಪಾಡುಗಳಲ್ಲಿನ ಅವ್ಯವಸ್ಥೆಗಳನ್ನು ಕಿತ್ತುಹಾಕಲು ದನಿಯೆತ್ತಿದರು. ಮಹಿಳೆಯರಿಗೆ ಶಿಕ್ಷಣ ಮತ್ತು ಆ ಮೂಲಕ ಅವರು ಸಶಕ್ತರಾಗಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವಂತೆ ಪ್ರಚಾರ ಮಾಡತೊಡಗಿದರು. ಲಿಂಗ ಸಮಾನತೆಯ ದೃಷ್ಟಿಕೋನವನ್ನು ಎಲ್ಲರೂ ಬೆಳೆಸಿಕೊಳ್ಳುವಂತೆ ಜನರಲ್ಲಿ ಜಾಗೃತಿಮೂಡಿಸಲು ಪ್ರಯತ್ನಿಸಿದರು. ವಕೀಲರಾಗಿದ್ದ ಅವರು ಮಹಿಳಾ ಹಕ್ಕುಗಳ ಪರ ಗಟ್ಟಿ ದನಿಯೆತ್ತಿದರು. ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸುತ್ತ, ರಾಜ್ಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ತರುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮ ಮಹತ್ವದ ಕೊಡುಗೆ ನೀಡಿದ್ದ ಪದ್ಮಾವತಿಯವರು 2002 ರಲ್ಲಿ ನಿಧನರಾದರು.

**ಟಿ. ಸುನಂದಮ್ಮ :** ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಟಿ.ಸುನಂದಮ್ಮನವರೂ ಪ್ರಮುಖರಾದವರು. 1915 ರಲ್ಲಿ ಕೋಲಾರ ಜಿಲ್ಲೆಯ ಹರಳಯ್ಯ ಎಂಬ ಗ್ರಾಮದಲ್ಲಿ ಜನಿಸಿದ ಸುನಂದಮ್ಮ ಬಾಲ್ಯದಿಂದಲೂ ಸ್ವಾತಂತ್ರ್ಯ ಚಳುವಳಿಯ ಬಗೆಗೆ ಕೇಳುತ್ತಲೇ ಅದರಲ್ಲಿ ಆಸಕ್ತಿ ಹೊಂದಿ ತಾನೂ ಆ ಸೇವಾ ಕಾರ್ಯದಲ್ಲಿ ಏನಾದರೂ ಮಾಡಲೇಬೇಕೆಂಬ ಹಂಬಲದಿಂದ ಬೆಳೆದವರು. ಚಿಕ್ಕ ವಯಸ್ಸಿನಿಂದಲೇ ಇಂತಹ ಪರಿಸರದಲ್ಲಿ ಬೆಳೆದ ಬಾಲಕಿ ಸುನಂದಾ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿಯೇ ಭಾಗವಹಿಸುತ್ತ, ನಂತರದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಸೇರಿದರು. ಹಲವಾರು ಮಹಿಳೆಯರನ್ನು ಆ ಹೋರಾಟದಲ್ಲಿ ಭಾಗವಹಿಸಲು ಸಂಘಟನೆಯನ್ನು ಮಾಡತೊಡಗಿದರು. ಅನೇಕ ಬಾರಿ ಬ್ರಿಟಿಷರ ಬಂಧನಕ್ಕೂ ಒಳಗಾದರು.

ಸ್ವಾತಂತ್ರ್ಯಾನಂತರದಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಸುನಂದಮ್ಮ ಮಹಿಳೆಯರ ಹಕ್ಕುಗಳಿಗಾಗಿ ಹೋರಾಡಲು ಮುಂದಾದರು. ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರೂ ಆಗಿ ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ತರಲು ಶ್ರಮಿಸಿದರು. 1987 ರಲ್ಲಿ ನಿಧನರಾದ ಸುನಂದಮ್ಮ ಅವರ ಆದರ್ಶ ಜೀವನ ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿದೆ.




**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು




ಒಂದು ದೇಶ–ಒಂದೇ ವೇತನ ಕುರಿತು 7ನೇ ವೇತನ ಆಯೋಗಕ್ಕೆ ಮನವಿ



ಯಾದಗಿರಿಯಲ್ಲಿ ನಡೆದ ಸದಸ್ಯತಾ ಅಭಿಯಾನ



ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯದಿಂದ ಪ್ರೌಢಶಾಲಾ ಶಿಕ್ಷಕರನ್ನು ವಿಮುಕ್ತಿಗೊಳಿಸದಿರಲು ಎಸ್‌ಎಸ್‌ಎಲ್‌ಸಿ ನಿರ್ದೇಶಕರಿಗೆ ಮನವಿ

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-09-2023 Date of Posting 20th or 21st of every month Posted at Periodical Rate

# ಚಿತ್ರಸುದ್ದಿ




ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ




ಬೆಂಗಳೂರಿನಲ್ಲಿ ನಡೆದ ಶಿಕ್ಷಣ ತಜ್ಞರ ಸಭೆ

**IF UNDELIVERED PLEASE RETURN TO SENDER**

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com